With regard to point (*c*), that Sri Hiregowdar had drawn the salary for the period for which even leave was not sanctioned, the note of the Ex-Office Manager dated 21st July 19 64 has been seen as also the reply of Sri V. S. Hiregowdar dated 29th July 1964. The arguments and counter-arguments have proceeded on personal lines and do not throw much light.

Lastly about (*d*), the copy of the representation given to the Convener of the Enquiry Committee by the officials of the Board against Sri V. S. Hiregowdar, Secretary of the Housing Co-operative Society, has not been made available.

It appears from above that the advances paid by Sri V. S. Hiregowdar have also been recovered and the question of taking further action does not arise, since he is no longer in service.

The transactions were irregular and Sri Hiregowdar should have exercised sufficient care to see that his over-enthusiasm did not outrun the bounds of prudence and elementary rules of office procedure. There are no amounts outstanding against him. No action is called for.

(Sd.) B. Channabasavappa,
Enquiry Officer.

Petition regarding levy on Jawar Crop submitted by the ryots of Aland Taluk

Presentation.

Sri D. B. KALMANKAR (Aland).—Sir. I present a petition signed by the ryots of Aland Taluk requesting for exemption from levy on jawar crop.

Mr. SPEAKER.—The petition is presented.

City of Bangalore Municipal Corporation (Amendment) Bill, 1969.

Motion to Consider

Sri B. M. PATIL (Minister of State for Municipal Administration).—Sir, I beg to move.....

† Sri M. NAGAPPA (Raichur).—Sir, I take objection to the moving of this Bill. My objection is only to clause 10 of the Bill which seeks to insert section 104A in the original Act. It deals with apportionment of liability for property tax when the premises assessed are let or sub-let. Under this provision, if any premises assessed to property tax is

(SRI M. NAGAPPA)

let, and its rateable value exceeds the amount of rent payable in respect thereof to the person upon whom under the provisions of section 104 the said tax is leviable, that person shall be entitled to receive from his tenant the difference between the amount of property tax levied upon him and the amount which would be leviable upon him if the said tax was calculated on the amount of rent payable to him. Therefore, the difference is to be collected from the person who is in actual possession of that particular building or premises or land. This is inconsistent with articles 13, 14 and 245 read with item 49 of Seventh Schedule of the Constitution. Property tax can be imposed on lands and buildings and it is to be paid by the owner or the person who is the occupier. But we are not entitled to confer a right on a person who can get his liability discharged through another person. It is quite unconstitutional and against the fundamental rights and also the contractual rights of the persons. Apart from that, wherever the Rent Control Act is in force, it is the Rent Controller who allots buildings. So, if this Bill is sought to be implemented in the Corporation area of Bangalore City where the Mysore Rent Control Act is in force, it will contravene the express provisions of the Rent Control Act. Under the Mysore Rent Control Act fixation of fair rent is to be done by a competent authority, but if this particular right is given under this Bill there will be a contradictory provision in the Bangalore Municipal Corporation Act as well as in the Mysore Rent Control Act. In view of these things I submit that this particular clause containing section 104-A may be deleted from the provisions of this Bill. We can impose a tax either on the owner or occupier only, but we cannot authorise any person to recover a portion of the tax from any person. Therefore I submit that this objection may be upheld and this particular provision may be deleted from this Bill.

2-00 P.M.

Sri D. B. KALAMANKAR.—Sir, I have objection to section 104 of clause 10. The provisions of section 104 and the provisions of section 104A are similar. There are contractual rights between the parties. In law either the occupant or the owner must pay the property tax. This legislation will amount to interference in the contractual obligations that arise between the lessor and the lessee and the lessor and the lessee or sub-lessee and this will amount to interference with the fundamental rights of the parties under articles 13 and 14. My submission is that by this legislation we are going to give some powers to the Government which would amount to denial of the rights of the parties. The spirit of the proposed sections 104 and 104 A is the same and so it is unconstitutional and ultra vires On these grounds I object to this clause.

Sri M. S. KRISHNAN.—I have also one objection in addition to what the hon'ble members Sri Nagappa and Sri Kalamankar have said. They have argued that clause 10 containing new sections 104 and 104-A should be deleted as they are unconstitutional I have one additional ground to object to this clause. If a person who is a tenant is asked to pay the tax, it not only creates complications with regard to house rent, etc., which have been explained by the hon'ble member Sri Nagappa, but probably it will be vesting that person who pays this tax with some right to claim ownership of the property on the ground that he is paying the tax. This would be unconstitutional and this would become excessive legislation which this House is not competent to make. On this ground I would say that sections 104 and 104-A should have been deleted from this Bill.

If the purpose of this Bill was only to reduce the period of supersession and to enable elections to be held as soon as possible, there was no reason to include these new sections 104 and 104-A in the provisions of this Bill. These relate to property tax. We have got several amendments to propose to the section dealing with property tax and other sections. We would like the Government to bring in a comprehensive Bill to amend the Bangalore Municipal Corporation Act at the time of the Budget Session so that all those points could be considered at length in detail. But since the limited purpose of this Bill was to enable the Government to hold elections to the Municipal Council as soon as possible by reducing the period of supersession, I think the inclusion of these two new sections 104 and 104-A is unconstitutional.

Sri T. R. SHAMANNA (Bangalore Fort).—Sir, the Statement of Objects and Reasons refers only to curtailment of the period of supersession of the Corporation under section 47A and nothing has been mentioned in the Statement of Objects and Reasons about property tax. Therefore, it is not advisable to rush through the clause relating to property tax in this Bill and so clause 10 may be deleted from the Bill.

† Sri B. M. PATIL.—Sir, section 1 4A only mentions and provides for apportionment of liability for the period when the premises are assessed or are sub-let. After the rent of the building is fixed and the building is assessed and if it is later on let out and if the rent that the owner receives from the tenant or the sub-tenant is less, then only it is justifiable that the owner will be entitled to recover from the tenant or the sub-tenant the difference between the amount of property tax levied and the amonnt which would be leviable on the actual rent received by him. This clause makes a provision for that. There is a similar provision for that in the present Bombay Municipal Corporation Act, the Delhi Municipal Corporation Act and also the Mysore Municipalities Act, 1964. This only gives a right to the owner to recover the difference from the tenant or the sub-tenant when he is paying a higher property tax and the actual rent that he receives from the tenant or the sub-tenant is comparatively less. So there is no discrimination and this

(SRI B. M. PATIL)

particular clause in no way violates articles 13 and 14 of the Constitution. So I submit that this may form part of the Bill that is now introduced.

MR. SPEAKER.—The hon. Members Sri Nagappa, Sri Kalmankar, Sri Krishnan and Sri Shamanna raised certain points of constitutional propriety and objected to the inclusion of clause 10 containing new sections 104 and 104A in the Bill. It is not contested by any of the hon. Members that it is not within the competence of this House to enact such legislation. Sri Nagappa pointed out that entry 149 in the State List, of course, confers the right upon this House to impose taxes on lands and buildings. So, it is not disputed by any of the hon. Members that this House has no right and power to impose taxes on buildings. It appears from their contention that this should have been done under the Rent Control Act. It is a matter well known to all that passing of legislation and making statutory provisions is always within the competence of this House. So, there should not be any constitutional objection to the enactment of Clause 11 of this Bill.

It is stated that powers are given to landlords to recover taxes from the tenanns or the sub-tenats. As pointed out by the Hon. Minister for Municipal Administration, it is only a question of apportionment. Recovery of taxes can be in the form of apportionment. I do not think there is any objection to Clause 10 of the Bill. As a matter of policy, I might state here that I have no power to adjudicate upon constitutional matters. I am guided by the provisions of the Constitution, and I shall, of course, take decisions, if the objections appear *prima facie* valid. When any controversial points arise, it is not for me to adjudicate. That is the role of the judiciary. After having heard the hon. Members, I do not think there is any valid *prima facie* objection to clause 10—clauses 104 and 104(a) of the original Act. I rule that they are perfectly within the competence of this House.

SRI M. S. KRISHNAN.—There is another aspect.

MR. SPEAKER.—The hon. Member may state about constitutional competence only and nothing beyond that.

SRI M. S. KRISHNAN.—There is no memorandum in this Bill. There must have been some sort of a financial memorandum, because this amounts to a Money Bill.

MR. SPEAKER.—If it pertains to expenditure out of the consolidated fund of the State, then it should be accompanied by a financial memorandum and not otherwise.

SRI M. S. KRISHNAN.—Sir, I would like to refer you to Rule 68 of the Rules of Procedure, which says :

> "A Bill involving expenditure shall be accompanied by a financial memorandum which shall invite particular attention to the clauses involving expenditure and shall also give an

estimate of the recurring and non-recurring expenditure involved in case the Bill is passed into law."

This has to be read with Article 199 of the Constitution, which says :

"For the purposes of this Chapter, a Bill shall be deemed to be a Money Bill if it contains only provisions dealing with all or any of the following matters, namely :

(a) the imposition, abolition, remission, alteration or regulation of any tax....."

Clause No. 10 which seeks to introduce clauses 104 and 104(a) of the original Act, seeks to regulate the tax. There is already property tax imposed upon the people of Bangalore. This Bill is in respect of tenants and sub-tenants and also in respect of those people who occupy quarters of Government. These are the three categories involved.

SRI K. PUTTASWAMY (Minister for Law Labour, and Parliamentary Affairs).—Sir, I rise to a Point of Order. You have been pleased to give a Ruling. Is it open to any hon. Member of this House to adduce additional arguments other than the one that were advanced earlier to persuade the Speaker to change his Ruling?

MR. SPEAKER.—I will deal with the points raised by the hon. Member Sri Krishnan first and the Point raised by Hon. Minister Sri Puttaswamy later.

SRI M. S. KRISHNAN.—Sir, I am not trying to adduce additioual reasons in order to persuade you. I know, you are not so easily persuadable. You are competent enough to judge whether it is correct or not. I have not got the capacity to do that much. I am only trying to persuade the Hon. Minister for Municipal Administration to give up that Clause. As per Articles 199 and 207 of the Constitution, I would say, this is beyond legislative competence and it should not be introduced.

MR. SPEAKER.—Hon. Member Sri M. S. Krishnan has raised a point under Articles 199 and 207, that in the absence of the recommendation of the Governor matters connected with taxes and regulation of taxes cannot be considered by this House. He also wanted to persuade the Hon. Minister, to accept his point of view. In that case he should not have raised the Point of Order, A Point of Order is always to be decided by the Chair only and not by others. Therefore, it is wrong on the part of the Member to have said so. The points raised by the Hon. Member are not tenable, and he should not repeat such point of orders hereafter. The provision of Article 199 (2) cited, does not come in the way, because it is a question of apportionment. The question is : supposing the property tax exceeds the rental amount, what should be done? It does not seek to impose any particular tax or measure as such. Therefore, the points made out by the hon. Member Sri Krishnan, have no force, and I rule them out. Now the Hon'ble Minister then move his motion.

Sri B. M. PATIL.—I beg to move :

"That the city of Bangalore Municipal Corporation (Amendment) Bill, 1969, be taken into consideration."

Mr. SPEAKER.—Motion moved :

"That the City of Bangalore Municipal Corporation (Amendment) Bill, 1969 be taken into consideration."

†Sri B. M. PATIL.—In the statement of objects and reasons, it is stated like this :

"There is no provision in the City of Bangalore Municipal Corporation Act, 1949 to curtail the period of supersession of the Corporation under Section 47A. It is considered necessary to confer power on the State Government to do so.

It is further considered necessary to provide for an electoral Roll being prepared by the Corporation itself. It is also considered necessary to make provision for apportionment of the property tax when the premises are let or sub let. This is not a money Bill. There is no new tax proposals. It is equitable and just that the owner of the land should receive rent on the basis of the property tax from the tenant.

Clause 2 : Sub-Section (1) of Section 30 of the City of Bangalore Municipal Corporation (Amendment) Act, 1949 provides that the Corporation shall at its first meeting after the first day of January each year, elect one of its members to be the Mayor. It is proposed to provide that such meeting for election of the Mayor shall be held after ordinary elections and at its first meeting and in the same month in the succeeding years which may be earlier than January. This amendment is consequential to the amendment proposed in clause 4.

Clause 3 : There is no provision in the said Act for convening the first meeting of the Corporation after an ordinary election. As there will be no Mayor continuing in office after the curtailment of the period of supersession to call for any meeting, it is considered necessary to provide for the holding of the first meeting of the Corporation after an ordinary election and convening of the same by the Commissioner and also to provide that the said meeting shall be presided over by the Divisional Commissioner, Bangalore.

Clause 4 : There is no provision in the principal Act to curtail the period of supersession of the Corporation under Clause 47-A. This clause confers power on the State Government to curtail the period of supersession.

Clauses 5 and 6 : Sections 50 and 52 of the principal Act, provide that the electoral roll of the Mysore Legislative Assembly for the time being in force for that part of the constituency as it included in any division shall for the purposes of the Act be deemed to be the electoral roll for such division. The electoral roll means the electoral roll prepared under the provisions of the Representation of the People Act, 1950.

The validity of the electoral roll under the Representation of the People Act, for the purposes of the Municipal elections has been questioned in certain writ petitions before the High Court. This clause therefore provides for the electoral roll being prepared by the Corporation itself.

Clause 7 : Under Section 60 of the principal Act, the term of office of the Councillors is three years beginning and expiring at noon on the first day of January. Since the elections may be held earlier, this clause provides that the term of office of the Councillors shall commence on the date of the publication of their names under Section 67 or immediately after the expiry of the term of office of the outgoing councillors or the period of supersession under section 47-A or the period of supersession as curtailed under section 47-AA whichever is later. This amendment is consequential to the amendment proposed in clause 4.

Clause 8 : This is only a consequential amendment for the holding of divisional Councillor's elections prior to the occurrence of the vacancies.

Clause 9 : This clause provides for exemption from property tax of buildings or lands exclusively used for student hostels which are not established or conducted for profit and buildings or lands exclusively used for educational purposes by educational institutions receiving grant-in-aid from the Government. I wish to submit that there are representations from the Educational Institutions and the authorities of the Hostels that these Institutions are run on public donations and therefore they should not be liable for property tax. With that particular object in view, this clause is incorporated to exempt the educational Institutions that receive grant from the Government and also the Hostels which are run on non-profit basis.

Clause 10 : This clause provides for apportionment of property tax when the premises are let or sub-let. I have already made clear about it earlier.

Clause 11 : This clause makes rules providing for the preparation and revision of electoral roll by Commissioner and is based on the provisions obtaining under the Bombay Provincial Municipal Corporation Act, 1949.

In this amending Bill, for purpose of conducting elections, the Corporation may have its own electoral roll. It may not depend upon the electoral roll that is prepared under the Representation of the People's Act, 1950. This Bill provides for the preparation of electoral roll of their own. Under these circumstances I commend this Bill for acceptance."

SRI H. SIDDAVEERAPPA.—Before the motion is taken into consideration, I want some clarifications. The main purpose of this Bill is to enable the Corporation to hold elections. So many other matters also have been incorporated. I feel it has been a sort of jumbling up of facts. They want to make a substantial changes because the elected body is coming into existence. I doubt whether any of the provisions

(SRI H. SIDDAVEERAPPA)

that have been incorporated are essential. I do not know what prompted the Government to bring about other things and adding and mixing up so many other words. I want to know whether there is any connection between the holding of elections of the Corporation and the suggested amendments in clauses 9 and 10.

Sri B. M. PATIL.—Certain clauses in the Bill that the Government intend to incorporate are as a result of the representations made by the public and also some of the educational Institutions. They have represented that they should be exempted from the levy of the property tax. So, taking into consideration the representations made by the Institutions who are getting the Government grant or which are run on public charities, the Government felt that such Institutions should be exempted from property tax and therefore, that particular clause is now incorporated.

About clause 104 (a), it is a apportionment of liability for property tax when the premises are let or sub-let. I have already made it very clear.

† ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಶ್ರೀ ಸಿದ್ದವೀರಪ್ಪನವರು ಹೇಳಿದ ಅಂಶಗಳಿಗೆ ಉತ್ತರ ಪೂರ್ವಕವಾಗಿ ಒಂದೆರಡು ಅಂಶಗಳನ್ನು ಹೇಳಲು ಅಪೇಕ್ಷೆ ಮಾಡುತ್ತೇನೆ. ಮೊದಲನೆಯದಾಗಿ ಕಾರ್ಪೋರೇಷನ್ನಿನವರು ಹಾಸ್ಟಲು ಮತ್ತು ಸ್ಕೂಲುಗಳಿಗೆ ಕಂದಾಯ ಹಾಕುವುದಕ್ಕೆ ಅಧಿಕಾರ ಇದೆಯೇ ಎಂದು ಕೇಳಿದ್ದಾರೆ. ಮೊದಲು ಹಾಸ್ಟಲುಗಳಿಗೆ ಮತ್ತು ಸ್ಕೂಲುಗಳಿಗೆ ಕಂದಾಯ ಇರಲಿಲ್ಲ. ಈವೊತ್ತಿನವರೆಗೂ ಯಾವ ಹಾಸ್ಟಲಿಗೂ ಹೈಸ್ಕೂಲ್‌ಗಳಿಗೂ ಕಂದಾಯ ಹಾಕುತ್ತಿರಲಿಲ್ಲ. 1966-67 ರಲ್ಲಿ ತಿದ್ದುಪಡಿ ಮಾಡಿ ಕಂದಾಯ ಹಾಕುವುದಕ್ಕೆ ಕಮೀಷನರಿಗೆ ಅಧಿಕಾರ ಕೊಟ್ಟಿದೆ. ದೊಡ್ಡ ದೊಡ್ಡ ವಿದ್ಯಾಸಂಸ್ಥೆಗಳಿಗೆ ರೇಟ್ ವ್ಯಾಲ್ಯೂ ಮೇಲೆ 5 ಸಾವಿರ 6 ಸಾವಿರ ರೂಪಾಯಿ ಕಂದಾಯ ಹಾಕುತ್ತಿದ್ದಾರೆ. ಹಾಸ್ಟಲುಗಳನ್ನು ಮತ್ತು ವಿದ್ಯಾ ಸಂಸ್ಥೆಗಳನ್ನು ನಡೆಸಲಶಕ್ಯಂತವರು ಪರಿಹಾರ ಕೊಡಬೇಕೆಂದು ಮನವಿ ಮಾಡಿಕೊಂಡರೂ ಕೂಡ ಅವರಿಗೆ ಅಂಥ ಪರಿಹಾರ ಕೊಡಲು ಈಗ ಇರುವ ಕಾನೂನಿನಲ್ಲಿ ಅವಕಾಶವಿಲ್ಲ. ಆ ರೀತಿ ಅವರಿಗೆ ಪರಿಹಾರ ಕೊಡಬೇಕಾದರೆ ಈ ತಿದ್ದುಪಡಿ ಆಗತ್ಯವಾಗಿದೆ. ಈ ತಿದ್ದುಪಡಿ ಮಾಡದೆ ಹೋದರೆ ಅಂಥ ವಿದ್ಯಾ ಸಂಸ್ಥೆಗಳಿಗೆ ಯಾವ ವಿಧವಾದಂಥ ವಿನಾಯಿತಿಯನ್ನೂ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಅಂಥಾ ವಿನಾಯಿತಿಯನ್ನು ಕೊಡಲು ಅವಕಾಶಮಾಡುವುದಕ್ಕಾಗಿ ಈ ತಿದ್ದುಪಡಿಯನ್ನು ತುರ್ತಾಗಿ ಮಾಡಬೇಕಾಗಿದೆ. 104 ಎ. ಪ್ರಕಾರ ಈಗಿರುವ ಪರಿಸ್ಥಿತಿ ಏನಾಗಿದೆ ಎಂದರೆ ಮೈಸೂರು, ಬೆಂಗಳೂರು, ದಾವಣಗೆರೆ ಇವು ಬರುಬರುತ್ತಾ ಬೆಳೆಯುತ್ತಾ ಇವೆ. ಆದ್ದರಿಂದ ಈಗ ಇರತಕ್ಕಂಥ ಕಾನೂನು ಪ್ರಕಾರ ಯಾವುದಾದರೂ ಮನೆಗೆ ಕಂದಾಯ ಹಾಕಬೇಕಾದರೆ ಆ ಮನೆಯ ಬಾಡಿಗೆಯ ವರಮಾನದ ಮೇಲೆ ಹಾಕಬೇಕಾಗಿದೆ. ಅದಾದಮೇಲೆ ಈಗ ಅನೇಕರು ಪ್ರಿಮಿಸೆಸ್‌ನಲ್ಲಿ ಸಬ್‌ಲೆಟ್ ಮಾಡಿ ಕ್ಯಾಂಟೀನ್ ನಡೆಸುವುದು, ಔಟ್ ಹೌಸ್ ಕಟ್ಟಿಸುವುದು ಹೀಗೆಲ್ಲಾ ಮಾಡುತ್ತಾರೆ. ಉದಾಹರಣೆ ಹೇಳಬೇಕಾದರೆ ಸಿನಿಮಾ ಥಿಯೇಟರ್‌ನಲ್ಲಿ ಕ್ಯಾಂಟೀನ್‌ಗಳನ್ನು ಕಟ್ಟಿ ತಿಂಗಳಿಗೆ 5 ಸಾವಿರ 6 ಸಾವಿರ ರೂಪಾಯಿ ಬಾಡಿಗೆಗೆ ಕೊಟ್ಟಂಥ ನಿದರ್ಶನ ಇದೆ. ಅವರ ಮೇಲೆ ಟ್ಯಾಕ್ಸ್ ಹಾಕೋಣವಾದರೆ, ಮನೆಯಮೇಲೆ ಕಂದಾಯ ಹಾಕಿದ್ದಾರೆ ಅದರಿಂದ ತೆಗೆದುಕೊಳ್ಳಲ ಎಂದು ಹೇಳಿ ತಪ್ಪಿಸಿಕೊಳ್ಳುವುದಕ್ಕೆ ಅವಕಾಶವಿದೆ. ಇಂತಹ ಸಂದರ್ಭದಲ್ಲಿ ಷಿಕ್ಕೇ ಬಾಡಿಗೆ ದಾರರು ಹೆಚ್ಚಿಗೆ ಬಾಡಿಗೆ ಕೊಡುವುದನ್ನು ಗಮನಕ್ಕೆ ತಂದುಕೊಂಡು ಹೆಚ್ಚಿಗೆ ಪ್ರಾಪರ್ಟಿ ಟ್ಯಾಕ್ಸ್ ಹಾಕುವುದು ಅವಶ್ಯಕ. ಆದುದರಿಂದ ತಿದ್ದುಪಡಿ ಅತ್ಯಂತ ಅವಶ್ಯಕವಾಗಿ ಆಗಬೇಕಾಗಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಬಿಲ್ಡಿಂಗ್ ಟ್ಯಾಕ್ಸ್‌ಮೇಲೆ 104 ಎ ಈ ಒಂದು ಕಾಲಂ ಏನು ಇದೆ ಅದು ಅತ್ಯಂತ ಅವಶ್ಯಕ. ಅದಲ್ಲದೆ ಪ್ರಾಪರ್ಟಿ ಟ್ಯಾಕ್ಸ್‌ನ್ನು ದೊಡ್ಡ ದೊಡ್ಡ ಮಾಲೀಕರುಗಳು ಕೊಡತಕ್ಕಂಥಾದ್ದು ಸರಿ. ಈಗ ಈ ಬಿಲ್ಲು ತರದೇ ಹೋದರೆ ಕಾರ್ಪೋರೇಷನ್‌ಗೆ ಬರುವ ಆದಾಯ ಕಡಿಮೆಯಾಗುತ್ತದೆ ಅನ್ನುವುದೂ ಸರಿ. ವರಮಾನ ಬಾರದೆ ಇದ್ದರೆ ಜನಗಳಿಗೆ ಕೊಡುವ ಸೌಲಭ್ಯ ಕಡಿಮೆಯಾಗುತ್ತದೆ.

Mr. SPEAKER.—It is an enabling provision.

Sri K. PUTTASWAMY.—Yes Sir. ನಾವು ಯಾವುದೇ ತೆರಿಗೆಯನ್ನು ನೇರವಾಗಿ ಹಾಕುತ್ತಾ ಇಲ್ಲ. ಕಾರ್ಪೊರೇಷನ್ ತೆರಿಗೆ ಹಾಕಬೇಕಾದರೆ, ವಿಧಾಯಕ ಕಾರ್ಯಕ್ರಮಗಳನ್ನು ಅನುಸರಿಸಿ ಅದನ್ನು ಹಾಕಬೇಕಾಗಿದೆ. ನಾವು ಇಲ್ಲಿ ನೇರವಾಗಿ ತೆರಿಗೆಯನ್ನು ಹಾಕುವುದಕ್ಕೆ ಈ ಮಸೂದೆಯಲ್ಲಿ ಅಳವಡಿಸಿಲ್ಲ. ಆ ಕಾರಣದಿಂದ ಈಗ ತಂದಿರತಕ್ಕದ್ದು ಬಹಳ ಸಾಧುವಾಗಿದೆ.

Sri M. S. KRISHNAN,—Sir, the Hon. Minister for Parliamentary Affairs is answering the points raised in respect of a Bill which is brought before this House by the Hon. Minister of State for Municipal Administration. I think it is not correct.

Mr. SPEAKER.—I shall see what is correct and what is not correct.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ (ಚಿಕ್ಕನಾಯಕನಹಳ್ಳಿ).—ಎಷ್ಟೋ ಹಾನ್ವಲುಗಳವರು ಅಂಗಡಿಗಳನ್ನು ಕಟ್ಟಿಸಿ ಬಾಡಿಗೆಗೆ ಕೊಡುತ್ತಾರೆ. ಆ ಬಾಡಿಗೆಯಿಂದ ಬಂದಂಥ ದುಡ್ಡಿನಲ್ಲಿ ಹಾನ್ವಲುಗಳನ್ನು ನಡೆಸುತ್ತಾ ಇದ್ದರೆ, ಅಂಥಾ ಸಂದರ್ಭದಲ್ಲಿ ಏನಾದರೂ ರಿಯಾಯಿತಿ ಇದೆಯೇ?

ಶ್ರೀ ಕೆ. ಪುಟ್ಟಸ್ವಾಮಿ.—ಒಂದು ಭಾಗ ಬಾಡಿಗೆಗೆ ಕೊಟ್ಟಿರಬಹುದು. ಅನೇಕ ವಿದ್ಯಾ ಸಂಸ್ಥೆಗಳು ಹುಡುಗರಿಗೋಸ್ಕರ ಅರಾಟ್ ಆದ ಪ್ರದೇಶದಲ್ಲಿ ಮಳಿಗೆ ಕಟ್ಟಿ ಬಾಡಿಗೆಗೆ ಕೊಟ್ಟಿರುತ್ತಾರೆ. ಅದರಿಂದ ಬರುವ ಹಣದಿಂದ ಸಂಸ್ಥೆ ನಡೆಸುತ್ತಿದ್ದಾರೆ. ಅದಕ್ಕೆ ಕಂದಾಯ ಹಾಕುವುದಿಲ್ಲ. ಆದರೆ ಯಾವ ಯಾವ ವಿದ್ಯಾ ಸಂಸ್ಥೆಗಳು ಪುಕ್ಕಟೆ ಬಾಡಿಗೆ ಪಡೆಯುತ್ತಿದ್ದಾರೋ ಅದರಮೇಲೆ ಕಂದಾಯ ಹಾಕುತ್ತೇವೆ. ಅಂಥಾದ್ದಕ್ಕೆ ವಿನಾಯಿತಿ ಕೊಡುವುದಿಲ್ಲ.

ಇನ್ನು ಎರಡನೆಯದಾಗಿ ಕೆಲವು ಬಾಡಿಗೆ ಮನೆಗಳಲ್ಲೇ ವಿದ್ಯಾ ಸಂಸ್ಥೆಗಳು ನಡೆಯುತ್ತಾ ಇವೆ. ಅದಕ್ಕೆ ಕಂದಾಯ ಮಾಫಿ ಮಾಡುತ್ತಾರೆಯೇ ಎಂದು ಕೇಳಿದ್ದಾರೆ. ನಾವು ಹೈಸ್ಕೂಲ್ ವಿದ್ಯಾರ್ಥಿಗಳ ಮೇಲೆ ಕಂದಾಯ ಹಾಕುತ್ತಾ ಇಲ್ಲ. ಅಲ್ಲಿ ಮನೆ ಮಾಲೀಕರು ಪಡೆಯುವ ಬಾಡಿಗೆ ವರಮಾನದ ಮೇಲೆ ಕಾರ್ಪೊರೇಷನ್ನಿನವರು ಕಂದಾಯ ಹಾಕಿ ವಸೂಲು ಮಾಡುತ್ತಾರೆ.

Sri L. SRIKANTAIAH (Nanjangud).—Sir, I had forwarded a motion to refer the City of Bangalore Municipal Corporation (Amendment) Bill, 1968 to a Joint Select Committee.

Mr. SPEAKER.—When did the hon'ble member send that motion?

Sri L. SRIKANTAIAH.—Just now, Sir.

Mr. SPEAKER.—As per rule 74 of the Rules of Procedure, only when a motion that a Bill be taken into consideration by the Assembly is passed, the member in charge or any other member may move that the Bill be referred to a Select or a Joint Select Committee. Therefore the hon'ble member may move his motion only after the consideration motion is passed by the House. Now, the Bill, is before the House for consideration. I call upon Sri T. R. Shamanna to speak on it. I would give preference to those hon'ble Members who represent Bangalore City, as the Bill pertains to Bangalore City Corporation. Sri Shamanna may begin his speech.

†ಶ್ರೀ ಟಿ. ಆರ್. ಶಾಮಣ್ಣ.—ಮಾನ್ಯ ಸಭಾಪತಿಗಳೇ ಈ ದಿನ ಬೆಂಗಳೂರು ಕಾರ್ಪೊರೇಷನ್ನಿನ ಅಮೆಂಡ್‌ಮೆಂಟ್ ಬಿಲ್ ಬಗ್ಗೆ ಸ್ವಾಗತ ಮಾಡಬೇಕೇ, ಅಥವಾ ವಿರೋಧ ಮಾಡಬೇಕೇ ಇದರ ಬಗ್ಗೆ ಮಾತನಾಡದೆ ಒಂದು ವಿಚಾರ ಮಾತ್ರ ತಮ್ಮ ಗಮನಕ್ಕೆ ತರಬೇಕಾಗಿದೆ. ಈ ಬೆಂಗಳೂರು ನಗರ ಕಾರ್ಪೊರೇಷನ್ ಬಿತ್ ಮೇಲೆ ಕಳೆದ 4-5 ವರ್ಷದಿಂದ ವರ್ಷಕ್ಕೆ ಒಂದು ಡು ಅಮೆಂಡ್‌ಮೆಂಟ್ ಬರುತ್ತಾ ಇವೆ. ಬರುತ್ತಾ ಇರತಕ್ಕಂಥ ಅಮೆಂಡ್‌ಮೆಂಟ್‌ಗಳು ಹೆಚ್ಚು ಕಡಿಮೆ ಜನಗಳಿಗೆ ತೊಂದರೆ ಕೊಡುವುದಕ್ಕೆ ಅಷ್ಟೇ ಹೊರತು ನಾಗರೀಕರ ಹಿತದೃಷ್ಟಿಯಿಂದ ಈ ಅಮೆಂಡ

(ಶ್ರೀ ಟಿ. ಆರ್. ಶಾಮಣ್ಣ)

ಮೆಂಟ್ ಬಿಲ್ಲನ್ನು ತರದೇ ಇರತಕ್ಕಂಥಾದ್ದು ಬಹಳ ಶೋಚನೀಯವಾಗಿದೆ. ಇದರಲ್ಲಿ ರಾಜಕೀಯ ಕಾರಣಗಳಿಗಾಗಿ ಈ ಅಮೆಂಡ್‌ಮೆಂಟ್ ಬರುತ್ತಾ ಇವೆಯೇ ಹೊರತು ಜನಗಳಿಗೆ ಅನುಕೂಲ ಮಾಡಿಕೊಡಬೇಕು ಎನ್ನುವ ಕಾರಣದಿಂದ ಬರುತ್ತಿಲ್ಲ ಎಂದು ಹೇಳಬಹುದು. ಕಾರ್ಪೊರೇಷನ್ ಸೂಪರ್‌ಸೆಷನ್ ಬಗ್ಗೆ ಹೆಚ್ಚು ಕಾರಣಗಳಿರುತ್ತವೆ. ಈ ಸಂಬಂಧದಲ್ಲಿ ಒಂದು ವಿಷಯ ಹೇಳ ಬೇಕೆಂದರೆ, 1949ರಿಂದ 1966ರವರೆಗೂ ಕಾಂಗ್ರೆಸ್ ಕಾರ್ಪೊರೇಷನ್ ಆಡಳಿತವನ್ನು ಹೊಂದಿತ್ತು. 18 ವರ್ಷಗಳ ಅವಧಿಯಲ್ಲಿ ಎಷ್ಟೇ ಅಕ್ರಮಗಳು ನಡೆದಿದ್ದರೂ ಕೂಡ ಕಾರ್ಪೊರೇಷನ್ ಆಕ್ಟ್‌ನನ್ನು ತಿದ್ದುಪಡಿ ಮಾಡುವುದಕ್ಕೆ ಹೋಗಲಿಲ್ಲ. ಸೂಪರ್‌ಸೆಷನ್ ಕ್ಲಾಜ್ ಕಾರ್ಪೊರೇಷನ್ ಆಕ್ಟ್‌ನಲ್ಲಿ ಮೊದಲು ಇರಲಿಲ್ಲ. ಮೊದಲನೆಯ ಬಾರಿಗೆ ಕಾಂಗ್ರೆಸ್ಸಿಗೆ ಕಾರ್ಪೊರೇಷನ್‌ನಲ್ಲಿ ಹಿಡಿತ ಹೋದ ತಕ್ಷಣ ಕಾರ್ಪೊರೇಷನ್ ಆಕ್ಟ್ ತಿದ್ದುಪಡಿ ಮಾಡಿ ಸೂಪರ್‌ಸೆಷನ್ ಮಾಡತಕ್ಕ ಅಧಿಕಾರವನ್ನು ಸರ್ಕಾರ ಪಡೆದುಕೊಂಡಿತು. ಈಗ ಕಾರ್ಪೊರೇಷನ್ ಸೂಪರ್‌ಸೀಡ್ ಮಾಡಿದ ಮೇಲೆ ಸಾಧಾರಣವಾಗಿ ಜನಗಳಿಗೆ ಅನುಕೂಲವಾಗಿದೆಯೇ, ಅನಾನುಕೂಲವಾಗಿದೆಯೇ ಎನ್ನುವುದರ ಬಗ್ಗೆ ನಾನು ಹೆಚ್ಚು ಮಾತನಾಡುವುದಕ್ಕೆ ಇಷ್ಟಪಡುವುದಿಲ್ಲ. ಆದರೆ ಕಾರ್ಪೊರೇಷನ್ ಸೂಪರ್‌ಸೀಡ್ ಮಾಡುವುದಕ್ಕೆ ರಾಜಕೀಯ ಕಾರಣವೇ ಹೊರತು ಬೇರೆ ಯಾವ ಕಾರಣವೂ ನನಗೆ ಕಾಣಲಿಲ್ಲ.

ಕಾರ್ಪೊರೇಷನ್ ಸೂಪರ್‌ಸೀಡ್ ಮಾಡಿದಾಗ ಸಾರ್ವತ್ರಿಕ ಚುನಾವಣೆಗಳು ನಡೆಯಬೇಕಾಗಿತ್ತು. ಹಾಗೆ ಮಾಡಲಿಲ್ಲ. ಇದರಿಂದ ಜನಗಳಿಗೆ ಕೂಡ ತಾತ್ಕಾಲಿಕವಾಗಿ ಶಿಕ್ಷೆಯನ್ನು ಕೊಟ್ಟಿದ್ದಾರೆ. 14 ಕಾರಣಗಳನ್ನು ಕೊಟ್ಟು ಏಕೆ ಸೂಪರ್‌ಸೀಡ್ ಮಾಡಬಾರದು ಎಂದು ಕಾರ್ಪೊರೇಷನ್ನಿಗೆ ಷೋಕಾಸ್ ನೋಟೀಸ್ ಕೊಟ್ಟರು. ಆ 14 ಕಾರಣಗಳೂ ಸರಿಯಾಗಿಲ್ಲ ಎಂದು ಕಾರ್ಪೊರೇಷನ್ ಉತ್ತರ ಕೊಟ್ಟಿತು. ಆದರೂ ಕೂಡ ಸರ್ಕಾರದವರು ಆ ವಿಷಯವನ್ನು ಗಮನಕ್ಕೆ ತೆಗೆದುಕೊಳ್ಳದೆ ಕಾರ್ಪೊರೇಷನ್ ಸೂಪರ್‌ಸೀಡ್ ಮಾಡಿದರು. ಅದರ ಬಗ್ಗೆ ಹೈಕೋರ್ಟಿಗೆ ಒಂದು ರಿಟ್ ಕೂಡ ಹಾಕಿತ್ತು. ಸೂಪರ್‌ಸೆಷನ್ ಮಾಡಿರುವುದು ಕ್ರಮಬದ್ಧವಾಗಿಲ್ಲ ಎಂದು ಆ ಆರ್ಡರನ್ನು ಹೈಕೋರ್ಟ್ ವಜಾ ಮಾಡಿತು. ಈ ಸಂದರ್ಭದಲ್ಲಿ ನ್ಯಾಯವಾಗಿ ಸೂಪರ್‌ಸೆಷನ್ ಕ್ಯಾನ್ಸಲ್ ಮಾಡುವುದಕ್ಕೆ ಬದಲಾಗಿ ಬೇರೆ ಒಂದು ಸೂಪರ್‌ಸೆಷನ್ ಆರ್ಡರ್ ಹೊರಡಿಸಿದರು. ಸರ್ಕಾರದವರು ಕೊಟ್ಟಿದ್ದ 14 ಕಾರಣಗಳ ಪೈಕಿ 5 ಕಾರಣಗಳು ಸರಿಯಾಗಿಲ್ಲ ಎನ್ನುವುದನ್ನು ಹೈಕೋರ್ಟ್‌ನವರು ಸ್ಪಷ್ಟಪಡಿಸಿದರು. ಮತ್ತೆ 6 ಕಾರಣಗಳು ಸರಿಯಾಗಿ ರುಜುವಾತಾಗಿಲ್ಲ ಎಂದು ಹೇಳಿದರು. ಮೂರು ಕಾರಣಗಳಿಗೆ ಕಾರ್ಪೊರೇಷನ್ ಅನ್ನು ಸೂಪರ್‌ಸೀಡ್ ಮಾಡಬಹುದು ಎನ್ನುವ ಒಂದು ಸೂಚನೆಯನ್ನು ಮಾತ್ರ ಕೊಟ್ಟಿದ್ದರು. ಆ ಸೂಚನೆಯ ಪ್ರಕಾರ ಮತ್ತೊಂದು ಸಾರಿ ಷೋ ಕಾಸ್ ನೋಟೀಸ್ ಕೊಡದೆ ಕಾರ್ಪೊರೇಷನ್ ಸೂಪರ್‌ಸೀಡ್ ಮಾಡಿದರು. ಆ ಮೂರು ಕಾರಣಗಳಾದರೂ ಹೀಗಿವೆ :

(1) ನೀರಿನ ಬಗ್ಗೆ ಕ್ಯಾಷ್ ರಿಬೇಟ್‌ಗೆ ಬದಲು ಉಚಿತ ನೀರನ್ನು ಕೊಡಬೇಕು ಎಂದು ಒಂದು ನಿರ್ಣಯವನ್ನು ಕಾರ್ಪೊರೇಷನ್ ಮಾಡಿತ್ತು. ಅಂದಾಜುಗಳ ಸಮಿತಿಯವರು ಕೊಟ್ಟಿರುವ ವರದಿಯನ್ನು ಸರ್ಕಾರದವರು ಒಪ್ಪಿಕೊಂಡುದರಿಂದ ಕ್ಯಾಷ್ ರಿಬೇಟ್‌ಗೆ ಬದಲು ಉಚಿತ ನೀರನ್ನು ಕೊಡಬೇಕೆಂದು ಒಪ್ಪಿಕೊಂಡಂತಾಗಿದೆ. ಆದ್ದರಿಂದ ಕಾರ್ಪೊರೇಷನ್ ಮಾಡಿರುವ ನಿರ್ಣಯ ನ್ಯಾಯವಾಗಿದೆ. ಆದರೂ ಈ ಕಾರಣವನ್ನು ಮುಂದಿಟ್ಟು ಸೂಪರ್‌ಸೀಡ್ ಮಾಡಿದರು.

(2) ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ರೂರ್ಸ್ ಇನ್ನೂ ಜಾರಿಗೆ ಬಂದಿಲ್ಲ ಎನ್ನುವುದು ಎರಡನೆಯ ಕಾರಣ. ಕಾರ್ಪೊರೇಷನ್ ಸೂಪರ್‌ಸೀಡ್ ಆಗುವುದಕ್ಕೆ ಮುಂಚಿತವಾಗಿ ಒಂದು ಅಂತಿಮ ತೀರ್ಮಾನಕ್ಕೆ ಅದರ ಬಗ್ಗೆ ಬರಬೇಕಾಗಿತ್ತು. ಈಗ ಕಾರ್ಪೊರೇಷನ್ ಸೂಪರ್‌ಸೀಡ್ ಆಗಿ ಎರಡು ವರ್ಷಗಳಾದರೂ, ಅಲ್ಲಿ ಸರ್ವಾಧಿಕಾರಿ ಇದ್ದರೂ ಇನ್ನೂ ಏಕೆ ಅದನ್ನು ಮಾಡಿಲ್ಲ ಎನ್ನುವುದರ ಬಗ್ಗೆ ನಾನು ಪ್ರಶ್ನೆ ಮಾಡುತ್ತೇನೆ. ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ರೂರ್ಸ್ ಮಾಡಿಲ್ಲ ಎನ್ನುವ ಕಾರಣಕ್ಕಾಗಿ ಸೂಪರ್‌ಸೀಡ್ ಮಾಡಿರುವಾಗ ಸರ್ವಾಧಿಕಾರಿಯ ಆಡಳಿತವಿದ್ದರೂ ಏಕೆ ಇನ್ನೂ ಅದನ್ನು ಕಾರ್ಯಗತ ಮಾಡಿಲ್ಲ ಎನ್ನುವುದಕ್ಕೆ ಕಾರಣವನ್ನು ಹೇಳಬೇಕಾಗಿದೆ. ಇದರ ಜೊತೆಗೆ 12 ವರ್ಷ ಆದರೂ ಕೂಡ ಇಂಟರ್‌ಸ್ಟೇಟ್ ಸೀನಿಯಾರಿಟಿ ಪಟ್ಟಿಯನ್ನು ಪೂರ್ತಿ ಮಾಡಿಲ್ಲ. ಕಾರ್ಪೊರೇಷನ್‌ನಲ್ಲಿ ಎಲ್ಲ ತಯಾರಾಗಿದ್ದರೂ ಅದನ್ನು ಜಾರಿಗೆ ತರುವುದಕ್ಕೆ ಎರಡು ವರ್ಷವಾದರೂ ಆಗದೆ ಹೋದರೆ ಕಾರ್ಪೊರೇಷನ್ ಸೂಪರ್‌ಸೀಡ್ ಮಾಡಿದ್ದು ಯಾವ ನ್ಯಾಯ ಎನ್ನುವುದರ ಬಗ್ಗೆ ಕೂಡ ಮಾನ್ಯ ಮಂತ್ರಿಗಳು ಹೇಳಬೇಕಾಗಿದೆ.

(3) ಕಾರ್ಪೊರೇಷನ್ ಅನೇಕ ನಿರ್ಣಯಗಳನ್ನು ಪಾಸ್ ಮಾಡಿದೆ ಹಾಗೆಯೇ ಇಟ್ಟಿದೆ ಎನ್ನುವುದು ಮತ್ತೊಂದು ಕಾರಣ. ಮೇಯರ್ ಆದವರು ಕಾಂಗ್ರೆಸ್ ಪಕ್ಷಕ್ಕೆ ಸೇರಿದವರಾಗಿದ್ದುಗ ನಿರ್ಣಯಗಳ ಬಗ್ಗೆ ಚರ್ಚೆ ಮಾಡದೆ 1 ರಿಂದ 80 ರವರೆಗೂ ಪಾಸಾಯಿತು ಎಂದು ಹೇಳಿದ್ದಾ, ಅವನ್ನು ಎದುರು ಪಕ್ಷದವರು ತಡೆಗಟ್ಟಬೇಕಾಯಿತು. ಇದರಲ್ಲಿ ಸ್ವಾಮಿಗಳ ವಿಶೇಷವಾರಿಗೆ ಸಂಬಂಧ ಪಟ್ಟದ್ದೂ ಇತ್ತು. ಅದರ ಪ್ರಕಾರ ಕಾಂಗ್ರೆಸ್‌ನವರು ಹುಚ್ಚಿಕೊಳ್ಳುವುದಕ್ಕೆ ಪ್ರಯತ್ನ ಮಾಡದಂತೆ ತಡೆಗಟ್ಟಲಾಯಿತು. ಸಕಾರಣವಾಗಿ ಕೆಲವು ವಿಷಯಗಳು ನಿಂತು ಹೋದುವೇ ಹೊರತು ಮತ್ತೇನೂ ಅಲ್ಲ. ಒಂದೇ ದಿನ ಬೆಳಿಗ್ಗಿನಿಂದ ಸಾಯಂಕಾಲದವರೆಗೂ ಕುಳಿತುಕೊಂಡು 80 ವಿಷಯಗಳನ್ನೂ ಅಂಗೀಕರಿಸಲಾಯಿತು.

ಈ ಮೂರು ಕಾರಣಗಳಿಗಾಗಿ ಸರ್ಕಾರದವರು ಕಾರ್ಪೊರೇಷನ್ನನ್ನು ಸೂಪರ್‌ಸೀಡ್ ಮಾಡಿದರು. ಕಾರ್ಪೊರೇಷನ್ ಸೂಪರ್‌ಸೀಡ್ ಆದಾಗ ಒಂದು ಕೋಟಿ ರೂಪಾಯಿ ಕ್ಯಾಷ್ ಬ್ಯಾಲನ್ಸ್ ಇತ್ತು, ಅದರ ಆರ್ಥಿಕ ಪರಿಸ್ಥಿತಿ ಚೆನ್ನಾಗಿಯೇ ಇತ್ತು. ಯಾವುದೇ ಸ್ವಶೀಯ ಸಂಸ್ಥೆಯನ್ನು ಸಕಾರಣವಿಲ್ಲದೆ, ರಾಜಕೀಯ ಕಾರಣಗಳಿಗಾಗಿ ಸೂಪರ್‌ಸೀಡ್ ಮಾಡತಕ್ಕುದು ನ್ಯಾಯವಾದುದಲ್ಲ. ಆದ್ದರಿಂದ ಇನ್ನು ಮೇಲಾದರೂ ಯಾವುದಾದರೂ ಕಾರ್ಪೊರೇಷನ್‌ನಲ್ಲಿ ಅವ್ಯವಸ್ಥೆ ಇದ್ದರೆ ಮಾತ್ರ ಸೂಪರ್‌ಸೀಡ್ ಮಾಡಬೇಕೇ ಹೊರತು ಸಕಾರಣವಿಲ್ಲದೆ ರಾಜಕೀಯ ಕಾರಣಗಳಿಗಾಗಿ ಸೂಪರ್‌ಸೀಡ್ ಮಾಡಬಾರದು ಎನ್ನುವುದನ್ನು ಒತ್ತಾಯಪೂರ್ವಕವಾಗಿ ಈ ಸಂದರ್ಭದಲ್ಲಿ ನಾನು ಹೇಳಬೇಕಾಗಿದೆ.

ಸೂಪರ್‌ಸೆಷನ್ ಆದ ಮೇಲೆ ಕಾರ್ಪೊರೇಷನ್ ಆಡಳಿತ ಸುಧಾರಿಸಿತು ಎಂದರೆ ಮಾನ್ಯ ಮಂತ್ರಿಗಳು ಮಾತನಾಡುವಾಗ ಕಾರ್ಪೊರೇಷನ್ ಆಡಳಿತ ಬಹಳ ಚೆನ್ನಾಗಿದೆ ಎಂದು ಹೇಳಿದರು. ಆದರೆ ನನಗೆ ತಿಳಿದ ಮಟ್ಟಿಗೆ ಕಾರ್ಪೊರೇಷನ್‌ನಲ್ಲಿ ಕೆಲವೆ ರಸ್ತೆಗಳನ್ನು ಅಗಲ ಮಾಡಿ ಮುಖ್ಯವಾದ ರಸ್ತೆಗಳಿಗೆ ದೊಡ್ಡ ದೊಡ್ಡ ದೀಪಗಳನ್ನು ಹಾಕುವುದು ಬಿಟ್ಟು ಬೇರೆ ಯಾವ ಕೆಲಸವೂ ನಡೆದಿಲ್ಲ ಎಂದರೆ ತಪ್ಪಾಗಲಾರದು. ಆಸ್ತಿ ತೆರಿಗೆ ಸರಿಯಾಗಿ ವಸೂಲಾಗುತ್ತಿಲ್ಲ ಎನ್ನುವ ಒಂದು ಕಾರಣವನ್ನೂ ಸರ್ಕಾರದವರು ಸೂಪರ್‌ಸೀಡ್ ಮಾಡುವಾಗ ಕೊಟ್ಟಿದ್ದರು. ಸೂಪರ್‌ಸೀಡ್ ಆದ ಮೇಲೆ ಯಾವ ರೀತಿ ವಸೂಲಾಗಿದೆ ಎನ್ನುವುದನ್ನು ನಾನು ಸಭೆಯ ಗಮನಕ್ಕೆ ತರುತ್ತೇನೆ. ನಾನು ಕಳೆದ ಎಂಟು ವರ್ಷಗಳ ಪಟ್ಟಿಯನ್ನು ತಂದಿದ್ದೇನೆ. ಅದು ಈ ರೀತಿಯಾಗಿದೆ:

1960–61	ರಲ್ಲಿ	ಶೇಕಡ	72 ರಷ್ಟು ತೆರಿಗೆ ವಸೂಲಾಗಿದೆ
1961–62	,,	79	,,
1962–63	,,	77	,,
1963–64	,,	78	,,
1964–65	,,	69	,,
1965–66	,,	59	,,
1966–67	,,	57	,,
1967–68	,,	56	,,

ಸೂಪರ್‌ಸೀಡ್ ಆದ ಮೇಲೆ ಎಂದರೆ 1965–66 ರಿಂದೀಚೆಗೆ ಆಸ್ತಿ ತೆರಿಗೆಯು ವಸೂಲಿ ವರ್ಷ ವರ್ಷವೂ ಕಡಿಮೆಯಾಗುತ್ತಿದೆ, ಯಾವರೀತಿಯಲ್ಲಿಯೂ ಹೆಚ್ಚಾಗಿಲ್ಲ. ಸೂಪರ್‌ಸೆಷನ್ ಮಾಡುವುದಕ್ಕೆ ಆಸ್ತಿ ತೆರಿಗೆ ವಸೂಲು ಮಾಡಿಲ್ಲ ಎನ್ನುವ ಕಾರಣವನ್ನು ಕೊಟ್ಟಿದ್ದರು. ಸೂಪರ್‌ಸೆಷನ್ ಆದ ವರ್ಷ 59 ಪರ್ಸೆಂಟ್ ವಸೂಲಾಗಿದ್ದುದು ಕಳೆದ ಎರಡು ವರ್ಷಗಳಲ್ಲಿ 57 ಪರ್ಸೆಂಟ್ ಮತ್ತು 56 ಪರ್ಸೆಂಟ್ ಆಗಿದೆ. ಕಾರ್ಪೊರೇಷನ್ನಿಗೆ ಸರ್ವಾಧಿಕಾರಿಯನ್ನು ಹಾಕಿದ ಮೇಲೆ ಲಂಚ ತಾಂಡವವಾಡುತ್ತಿದೆ. ಲಂಚವಿಲ್ಲದೆ ಯಾವ ಕೆಲಸವೂ ಆಗುತ್ತಿಲ್ಲ. ಅಲ್ಲಿನ ಸಿಬ್ಬಂದಿ ವೆಚ್ಚ ಮೊದಲು 64-65ರಲ್ಲಿ 70 ಲಕ್ಷ ರೂಪಾಯಿ ಇದ್ದುದು ಈಗೊತ್ತಿನ ವರ್ಷ 1 ಕೋಟಿ 35 ಲಕ್ಷ ರೂಪಾಯಿ ಎಂದರೆ ಮೊದಲಿನ ಎರಡರಷ್ಟು ಆಗಿದೆ. ಸರ್ಕಾರಿ ಅಧಿಕಾರಿಗಳ ಒಂದು ಸೈನ್ಯವನ್ನೇ ಅಲ್ಲಿ ತಂದು ಹಾಕಿದ್ದಾರೆ. ಒಬ್ಬ ಚೀಫ್ ಇಂಜಿನಿಯರು, ಒಬ್ಬ ಡೆಪ್ಯುಟಿ ಇಂಜಿನಿಯರು ಮತ್ತು 4 ಜನ ಅಸಿಸ್ಟೆಂಟ್ ಇಂಜಿನಿಯರುಗಳಿದ್ದುದು ಈಗ ಒಬ್ಬ ಚೀಫ್ ಇಂಜಿನಿಯರ್, 5 ಜನ ಡೆಪ್ಯುಟಿ ಇಂಜಿನಿಯರುಗಳು, 13 ಜನ ಅಸಿಸ್ಟೆಂಟ್ ಇಂಜಿನಿಯರುಗಳಿದ್ದಾರೆ. ಹಾಗೆಯೇ ಒಬ್ಬ ಒಬ್ಬ ಡೆಪ್ಯುಟಿ ಕಮಿಷನರಿದ್ದುದು ಈಗೊತ್ತಿನ ದಿವಸ 4 ಜನ ಡೆಪ್ಯುಟಿ ಕಮಿಷನರು

(ಶ್ರೀ ಟಿ. ಆರ್. ಶಾಮಣ್ಣ)

ಗಳಾಗಿದ್ದಾರೆ. ಆರ್ಮಿ ಆಫ್ ಆಫೀಸರ್ಸ್ ಇದ್ದರೂ ಕೂಡ ಕೆಲಸ ಸರಿಯಾಗಿ ಆಗುತ್ತಿಲ್ಲ; ಲಂಚವುಪಾವತ್ತುಗಳಿಲ್ಲದೆ ಯಾವ ಕೆಲಸವೂ ಆಗುತ್ತಿಲ್ಲ. ಒಂದು ಲೈಸನ್ಸ್ ಸಿಕ್ಕಬೇಕಾದರೆ, ಖಾತಾ ಟ್ರಾನ್ಸ್‌ಫರ್ ಆಗಬೇಕಾದರೆ, ಭಗೀರಥ ಪ್ರಯತ್ನ ಮಾಡಬೇಕಾಗಿದೆ. ಕಾರ್ಪೊರೇಷನ್ ಸೂಪರ್‌ಸೀಡ್ ಮಾಡಿದ್ದರಿಂದ ಲಂಚ ತೆಗೆದುಕೊಳ್ಳುವವರಿಗೆ ಸುಗ್ಗಿಯ ಕಾಲವಾಗಿದೆ. ಜನಗಳ ಸೌಕರ್ಯವನ್ನು ನೋಡುತ್ತಿಲ್ಲ. ಅವರ ಗಮನವೆಲ್ಲ ಕಣ್ಣಿಗೆ ಕಾಣುವ ರಸ್ತೆಗಳ ಕಡೆಗೆ ಇದೆ. ಬಡವರು ವಾಸ ಮಾಡುವ ಕಡೆಗೆ ಗಮನ ಕೊಡುತ್ತಿಲ್ಲ. ಟ್ಯಾಕ್ಸ್ ಕೊಡದೆ ಇರುವವರಿಗೆ ಏಕೆ ಸೌಲಭ್ಯಗಳನ್ನು ಕಲ್ಪಿಸಿಕೊಡಬೇಕು ಎಂದು ಹೇಳುತ್ತಾರೆ. ಮಾಮೂಲು ಕಡಿಮೆಯಾಗಿಲ್ಲ, ಯಾವ ವಿಧವಾದ ಸೌಲಭ್ಯವೂ ಹೆಚ್ಚಾಗಿಲ್ಲ, ಕಿರುಕುಳ ನಾನಾ ರೀತಿಯಲ್ಲಿ ಆಗುತ್ತಿದೆ. ಹೀಗಿರುವಾಗ ಸೂಪರ್‌ಸೆಷನ್ ಅಗತ್ಯವೇನಿದೆ ಎಂಬುದನ್ನು ಯೋಚನೆಮಾಡಬೇಕು. ಆಸ್ತಿ ತೆರಿಗೆಯನ್ನು ಏರಿಸಿದ್ದಾರೆ, ಲಂಚ ಕೊಟ್ಟು ಕೆಲವರು ಹೆಚ್ಚಾಗಿ ಏರಿಸುವಂತೆ ಮಾಡಿಕೊಂಡಿದ್ದಾರೆ. ನ್ಯಾಯವಾಗಿ ಕೆಲವರು ಅಪೀಲು ಹಾಕಿದರೂ ಅವರಿಗೆ ಸರಿಯಾದ ಪ್ರತಿಫಲ ಸಿಕ್ಕದೆಹೋಗಿದೆ, ಅಡ್ಮಿನಿಸ್ಟ್ರೇಟರು ಕೆಲವರಿಗೆ ರಿಯಾಯಿತಿ ತೋರಿಸಿದ್ದಾರೆ. ರಾಜಕೀಯ ಕಾರಣಗಳಿಗಾಗಿ ಸೂಪರ್‌ಸೆಷನ್ ಮಾಡಿರಬಹುದು, ಈ ರೀತಿ ಮಾಡಬಾರದು. ನಿಜವಾಗಿ ಕಾರ್ಪೊರೆಷನ್ ಆಡಳಿತ ಹೊಲಸಾಗಿದ್ದರೆ ಆಗ ಹಾಗೆ ಮಾಡಬಹುದಾಗಿತ್ತು. ಈಗ ಸೂಪರ್‌ಸೆಷನ್ ಆದಮೇಲೆ ಜನರಿಗೆ ಇನ್ನೂ ತೊಂದರೆಯಾಗಿದೆ. 1970ನೆಯ ಮೇವರೆಗೆ ಸೂಪರ್‌ಸೆಷನ್ ಇದೆ. 64ರಲ್ಲಿ ಚುನಾಯಿತರಾದ ಕೌನ್ಸಿಲರುಗಳಿದ್ದರು, ಅವರಮೇಲೆ ತಪ್ಪು ಹೊರಿಸಿದರು, ಅವರ ಅವಧಿ 67ನೆಯ ಇಸವಿಗೆ ಮುಗಿಯುತ್ತಿತ್ತು. ಅಲ್ಲಿಯವರೆಗೆ ಬೇಕಾದರೆ ಸೂಪರ್‌ಸೆಷನ್ ಮಾಡಬಹುದಾಗಿತ್ತು. ಹಾಗೆ ಮಾಡದೆ ಕಾಂಗ್ರೆಸ್ ಅಧಿಕಾರಕ್ಕೆ ಬರಲು ಅವಕಾಶವಾಗಬೇಕಾದರೆ 70ನೆಯ ಇಸವಿಯವರೆಗೆ ಕಾಯಬೇಕು ಎಂದು ಅದುವರೆಗೆ ಅದು ಬರಲು ಸಾಧ್ಯವಿಲ್ಲ ಎಂದು ಯೋಚಿಸಿ ಹಾಗೆ ಮಾಡಿರುವುದು ಧರ್ಮವೇ, ನ್ಯಾಯವೇ ಎಂಬುದನ್ನು ಯೋಚನೆಮಾಡಬೇಕು. ಒತ್ತಾಯ ಬಂತು ಎಂದು ಈಗ ಸೂಪರ್‌ಸೆಷನ್ ಅವಧಿಯನ್ನು ಕಡಮೆಮಾಡಲು ಅಧಿಕಾರ ಪಡೆಯುವುದಕ್ಕೆ ಈ ತಿದ್ದುಪಡಿ ವಸೂದೆಯನ್ನು ತಂದಿದ್ದಾರೆ. ಈಗ ತಿದ್ದುಪಡಿಮಾಡಿದರೂ ಕೂಡ ಖಚಿತವಾಗಿ ಚುನಾವಣೆ ನಡೆಯುವುದೆಂಬ ಭರವಸೆ ಇಲ್ಲ. ಹೊಸವಾಗಿ ವೋಟರ್ಸ್ ರೋಲ್‌ತಯಾರಿಸಿ ಚುನಾವಣೆ ಮಾಡಬೇಕಾದರೆ ಡಿಸೆಂಬರಿಗೆ ಮುಂಚೆ ಸಾಧ್ಯವಾಗುವುದಿಲ್ಲ. ಈಗಿರುವ ವೋಟರ್ಸ್ ರೋಲ್ ತಿದ್ದುಪಡಿ ಮಾಡಿ ಆಖೈರು ಪಟ್ಟಿ ತಯಾರಿಸಬೇಕಾದರೆ ಸುಮಾರು 5 ತಿಂಗಳು ಬೇಕು. ನಂತರ ಡಿಸೆಂಬರು 1969 ರಲ್ಲಿ ಚುನಾವಣೆ ಮಾಡಬಹುದು. ಖಚಿತವಾಗಿ ಇಂಥ ಕಾಲದಲ್ಲಿ ಚುನಾವಣೆ ನಡೆಯುತ್ತದೆಂದು ಮಂತ್ರಿಗಳು ಹೇಳಿದ್ದರೆ ಚೆನ್ನಾಗಿತ್ತು. ಏನು ಹೇಳುವರೋ ನೋಡೋಣ.

ಈ ಮಸೂದೆಯಲ್ಲಿ ಕೆಲವು ತಿದ್ದುಪಡಿಗಳನ್ನು ಮಾಡಿದ್ದಾರೆ, ನಾನು ಕೆಲವು ತಿದ್ದುಪಡಿಗಳನ್ನು ಕಳಿಸಿದ್ದೇನೆ, ಅವುಗಳ ಮೇಲೆ ಕ್ಲಾಜುವಾರು ಚರ್ಚೆಯಾಗುವಾಗ ಮಾತನಾಡಲು ಅವಕಾಶ ಕೊಡಬೇಕು. ಈಗ ಮುಖ್ಯವಾಗಿ ಸೂಪರ್‌ಸೆಷನ್ ಪೀರಿಯಡ್ ಕಡಮೆ ಮಾಡುವುದಾಗಿ ಹೇಳುತ್ತಾರೆ. ತಿದ್ದುಪಡಿಗಳನ್ನು ತರುವಾಗ ಇನ್ನು ಕೆಲವು ತರಬೇಕಾಗಿತ್ತು. ಹೆಂಡ ಕುಡಿಯುವುದನ್ನು ತಪ್ಪಿಸುವುದಕ್ಕೆ ಸಾಧ್ಯವಾಗಿಲ್ಲ, ಮತ್ತು ಕುಡಿಸುವುದನ್ನೂ ತಪ್ಪಿಸುವುದಕ್ಕಾಗಿಲ್ಲ. ಹೆಂಡ ಕುಡಿದು ಬಂದರೆ ಅಂಥ ಸದಸ್ಯರನ್ನು ವಜಾಮಾಡುವುದಕ್ಕೆ ಅವಕಾಶವಾಗುವಂತೆ ಒಂದು ಕ್ಲಾಜನ್ನು ಸೇರಿಸಿದರೆ ಒಳ್ಳೆಯದು. ಹಿಂದೆ ಕಾಂಗ್ರೆಸ್ ಸದಸ್ಯರೇ ಹೆಂಡ ಕುಡಿದು ಬಂದು ಕಾರ್ಪೊರೇಷನ್ ಸಭೆಯಲ್ಲಿ ಗಲಾಟೆ ಮಾಡಿದ್ದಾರೆ. ಅಂಥವರಿರುವುದು ಕಾರ್ಪೊರೇಷನ್‌ಗೆ ಒಳ್ಳೆಯದಲ್ಲ. ಹೆಂಡ ಕುಡಿದು ಬಂದು ಸಭೆಯಲ್ಲಿ ಸಿಕ್ಕಾಪಟ್ಟೆ ಮಾತನಾಡುವುದಕ್ಕೆ ಅವಕಾಶವಿರಬಾರದು. ಕಾರ್ಪೊರೇಟರುಗಳಿಗೆ ಸಿಟಿ ಫಾದರ್ಸ್ ಎಂದು ಹೇಳುತ್ತಾರೆ. ಆದರೆ ಕುಡಿಸಿ ಓಟು ಪಡೆಯುವುದು ಕುಡುಕರು ಚುನಾಯಿತರಾಗಿ ಬರುವುದು ಸಾಧುವಲ್ಲ. ಕುಡಿಯುವವರು ಮತ್ತು ಕುಡಿಸುವವರು ಕಾರ್ಪೊರೇಷನ್ನಿಗೆ ದೂರವಿರುವಂತೆ ಮಾಡಿದರೆ ಒಳ್ಳೆಯದು. ಇಲ್ಲವಿದ್ದರೆ ಏನೇ ರೂಲ್ಸ್ ಮಾಡಿದರೂ ತೊಂದರೆ ತಪ್ಪುವುದಿಲ್ಲ. ಗಾಂಧಿಯವರ ಹೆಸರನ್ನು ಹೇಳುವವರು ಅವರ ಶತಮಾನೋತ್ಸವ ಕಾಲದಲ್ಲಾದರೂ ಕುಡಿಯುವವರು ಮತ್ತು ಕುಡಿಸುವವರಿಗೆ ಕಾರ್ಪೊರೇಷನ್ನಿನಲ್ಲಿ ಜಾಗವಿಲ್ಲವೆಂದು ಹೇಳಿ ತಡೆ ಮಾಡುವುದು ಒಳ್ಳೆಯದು. ದಿವಂಗತ ರಾಲ್‌ಬಹದ್ದೂರ್ ಶಾಸ್ತ್ರಿಗಳು ಅಕ್ಕಿಯನ್ನು ನೀಗಿದ ಕಾಲದಲ್ಲಿ ದೇಶವೆಲ್ಲಾ ಸಂಕಟದಲ್ಲಿ ಮುಳುಗಿರುವಾಗ ಕಂಬಳಗೋಡಿನಲ್ಲಿ ಅನೇಕರಿಗೆ ಕೌನ್ಸಿಲರು ಕುಡಿಸಿದರೆಂದು ಪತ್ರಿಕೆಗಳಲ್ಲಿ ಬಂದಿತು. ಇಂಥವರಿಗೆ ಕಾರ್ಪೊರೇಷನ್ನಿನಲ್ಲಿ ಜಾಗ ಕೊಡುವುದು ಸರಿಯಲ್ಲ. ಒಟ್ಟಿನಲ್ಲಿ ಯೋಗ್ಯ ಸದಸ್ಯರನ್ನು ಬರಮಾಡಿಕೊಳ್ಳುವುದಕ್ಕೆ ತಕ್ಕ ನಿಯಮವನ್ನು ಮಾಡಿದರೆ ಸಾಕು, ಕಾಂಗ್ರೆಸ್ ಪಕ್ಷದವರಾಗಲಿ, ಬೇರೆ ಪಕ್ಷಗಳವರಾಗಲಿ ಯಾರೇ ಆದರೂ

ಒಳ್ಳೆಯವರು ಚುನಾಯಿತರಾಗಿ ಬರಬೇಕಾದ್ದು ಅವಶ್ಯಕ. ಯೋಗ್ಯರಾದವರನ್ನು ಚುನಾವಣೆಗೆ ನಿಲ್ಲಿಸುವುದಕ್ಕೆ ಅವಕಾಶವಾಗುವಂಥ ತಿದ್ದುಪಡಿಗಳನ್ನು ತಂದರೆ ಅನುಕೂಲವಾಗುತ್ತದೆ ಎಂಬ ಸಲಹೆಯನ್ನು 10-12 ವರ್ಷಗಳಿಂದ ನನ್ನ ಅನುಭವದಲ್ಲಿ ಹೇಳುತ್ತಿದ್ದೇನೆ. ಯಾರಾದರೂ ಸರಿ, ಚುನಾವಣೆಯಲ್ಲಿ ಗೆಲ್ಲಲು ಅವಕಾಶವಿದ್ದರೆ ಅವರಿಗೆ ಕಾಂಗ್ರೆಸ್ ತಾಳಿ ಕಟ್ಟುವುದು. ಅವರು ಖಾದಿ ಹಾಕದಿದ್ದರೂ ಪರವಾಗಿಲ್ಲ, ಚುನಾವಣೆಗೆ ಟಿಕೆಟ್ ಪಡೆದಮೇಲೆ ಖಾದಿ ಹಾಕಿದರೆ ಸಾಕು, ಇಂಥ ವರಿಗೆ ಕಾಂಗ್ರೆಸ್ ತಾಳಿ ಕಟ್ಟುವುದು ಸರಿಯಲ್ಲ. ಬೆಂಗಳೂರು ಕಾರ್ಪೊರೇಷನ್‌ನಿಗೆ ಮೊದಲು ಅನೇಕ ಗಣ್ಯ ವ್ಯಕ್ತಿಗಳು ಸದಸ್ಯರಾಗಿ ಬರುತ್ತಿದ್ದರು, ಬರುಬರುತ್ತಾ ಗೆಲ್ಲಬಹುದೆಂಬ ನಿರೀಕ್ಷೆ ಯಾರಿಗೆ ಇದೆಯೋ ಅವರು ನಿಲ್ಲುತ್ತಿದ್ದಾರೆ, ಅಂಥವರನ್ನು ನಿಲ್ಲಿಸುವ ಸಂಭವ ಹೆಚ್ಚಾಗಿದೆ. ಮುಖ್ಯ ಮಂತ್ರಿಗಳು ಪ್ರಾಮಾಣಿಕರು ಮುಂದೆ ಬರುವುದಕ್ಕೆ ಅವಕಾಶ ಮಾಡಿ ಒಂದು ಉದಾಹರಣೆ ಹಾಕಿ ತೋರಿಸಬೇಕು. ಒಟ್ಟಿನಲ್ಲಿ ಯೋಗ್ಯರಾದವರು ಬರುವುದಕ್ಕೆ ಅವಕಾಶ ಮಾಡಬೇಕೆಂದು ಒತ್ತಾಯವಾಗಿ ಹೇಳುತ್ತೇನೆ.

ಮೊದಲನೆಯದಾಗಿ ಟರ್ಮ್ ಆಫ್ ಕೌನ್‌ಸಿಲರ್ಸ್ 3 ವರ್ಷವಿರುವುದನ್ನು 4 ವರ್ಷ ಮಾಡ ಬೇಕೆಂದಿರುವುದು ಸ್ವಾಗತಾರ್ಹವಾದುದು. ಬೇರೆ ಮುನಿಸಿಪಾಲಿಟಿಗಳಲ್ಲಿ 4 ವರ್ಷ ಅವಕಾಶ ವಿರುವಾಗ ಇಲ್ಲಿ 3 ವರ್ಷ ಇರುವುದು ಸರಿಯಲ್ಲ. ಆದುದರಿಂದ ಈ ವಿಚಾರದಲ್ಲಿ ತಿದ್ದುಪಡಿ ತಂದಿರುವುದು ನ್ಯಾಯವಾಗಿದೆ.

101ನೆಯ ಸೆಕ್ಷನ್ನನ್ನು ತಿದ್ದುಪಡಿಮಾಡಿದೆ. ಮೊದಲು ಚಾರಿಟೆಬಲ್ ಇನ್‌ಸ್ಟಿಟ್ಯೂಷನ್ಸ್‌ಗೆ ವಿನಾಯಿತಿ ಇತ್ತು. ಈಗ ಕರಾಶಾರೆಗಳು ಮತ್ತು ಹಾಸ್ಟರ್‌ಗಳಿಗೆ ಮಾತ್ರ ಆಸ್ತಿ ತೆರಿಗೆಯಿಂದ ವಿನಾಯಿತಿ ಕೊಡಬೇಕೆಂದು ಮಾಡಿದ್ದಾರೆ. ಈ ಸಂಬಂಧದಲ್ಲಿ ನನ್ನ ಅರಿಕೆ ಇಷ್ಟೆ: ಅನೇಕ ಸಾರ್ವಜನಿಕ ಸಂಸ್ಥೆಗಳಿವೆ, ಕನ್ನಡ ಸಾಹಿತ್ಯ ಪರಿಷತ್ತು, ಗೋಕರೆ ಇನ್‌ಸ್ಟಿಟ್ಯೂಟ್, ಸೇವಾಸದನ ಮುಂತಾದುವು ಇವೆ. ಹೀಗೆ ಜನರ ಸೇವೆ, ಕಲಾಸೇವೆ ಮಾಡುವಂಥ ಮತ್ತು ಕಲ್ಚರರ್ ಮತ್ತು ಲಿಟರೆರಿ ಆಕ್ಟಿವಿಟೀಸ್ ಇರುವ ಅನೇಕ ಸಂಸ್ಥೆಗಳಿವೆ. ಇವಕ್ಕೆ ತೆರಿಗೆ ವಿನಾಯಿತಿ ಸಿಕ್ಕಬೇಕಾದ್ದು ಅಗತ್ಯ. ಇದರ ಬಗ್ಗೆ ಒತ್ತಾಯಮಾಡುತ್ತೇನೆ. ಭತ್ಕದ ಮಾಲೀಕರು ಬಾಡಿಗೆ ಹೆಚ್ಚು ವಿಧಿಸುತ್ತಿದ್ದಾರೆ ಎಂದು ಅವರಿಗೆ ಶಿಕ್ಷೆಮಾಡುವುದಕ್ಕೆ ಹೋಗಿ ಅನೇಕ ಒಳ್ಳೆಯ ಸಂಸ್ಥೆಗಳಿಗೆ ತೊಂದರೆ ಮಾಡಿದಂತಾಗಿದೆ. ಆದುದರಿಂದ ಈ ಸಂಬಂಧದಲ್ಲಿ ಯೋಚನೆಮಾಡಿ ಕಳಿಸಿರುವ ತಿದ್ದುಪಡಿಯನ್ನು ಒಪ್ಪಿಕೊಳ್ಳಬೇಕೆಂದು ಸೂಚಿಸುತ್ತೇನೆ.

ಆಮೇಲೆ ಇನ್ನೊಂದು ಮುಖ್ಯ ವಿಚಾರ. ಆಸ್ತಿ ತೆರಿಗೆಯನ್ನು ಕೊಡುವಾಗ ಏಪ್ರಿಲ್ ಒಂದರಿಂದ ಏಪ್ರಿಲ್ 30 ರೊಳಗೆ 6 ತಿಂಗಳ ಅಡ್ವಾನ್ಸನ್ನು ಕೊಡಬೇಕು, ಎರಡನೆಯ ಕಂತನ್ನು ಅಕ್ಟೋಬರ್ ಒಂದರಿಂದ ಅಕ್ಟೋಬರ್ 31 ರೊಳಗೆ ಕೊಡಬೇಕು. ಇಲ್ಲದಿದ್ದರೆ ಹೊಸ ಕ್ಲಾಜಿನ ಪ್ರಕಾರ ಸೇಕಡ 5ರಷ್ಟು ದಂಡ ತರಬೇಕಾಗುವುದು. ಇದು 104ನೆಯ ಸೆಕ್ಷನ್ನಿನಲ್ಲಿದೆ. ಎಲ್ಲೂ ಕೂಡ ಅಡ್ವಾನ್ಸಾಗಿ ಆಸ್ತಿ ತೆರಿಗೆ ಅಡ್ವಾನ್ಸಾಗಿ ವಸೂಲುಮಾಡುವುದು ಮತ್ತು ಹೀಗೆ ಅಡ್ವಾನ್ಸಾಗಿ ಕೊಡದಿದ್ದರೆ ಪೆನಾಲ್ಟಿ ವಸೂಲುಮಾಡುವುದು ಇಲ್ಲ, ಹೀಗೆ ಮಾಡುವುದು ಧರ್ಮವಲ್ಲ, ನ್ಯಾಯವಲ್ಲ. 6 ತಿಂಗಳು ಕಳೆದಮೇಲೂ ಕೊಡದಿದ್ದರೆ ಪೆನಾಲ್ಟಿ ಹಾಕಬಹುದು. ಈಗ ಬೌರ್ ಕರೆಕ್ಟರುಗಳು ಬೇಕಾದಷ್ಟಿದ್ದಾರೆ, ಅವರು ಹೋಗಿ ವಸೂಲುಮಾಡುತ್ತಿಲ್ಲ, ಆಸ್ತಿ ತೆರಿಗೆ ಕೊಡ ಬೇಕಾದವರೇ ಆಫೀಸಿಗೆ ಹೋಗಿ ಕಟ್ಟಬೇಕು. ಹಾಗೆ ಮೊದಲನೆಯ ಕಂತನ್ನು ಏಪ್ರಿಲ್ 30ನೆಯ ತಾರೀಖಿನೊಳಗಾಗಿ ಕಟ್ಟದಿದ್ದರೆ ಜುರ್ಮಾನೆ ಕೊಡಬೇಕಾಗುತ್ತದೆ.

ತಾವು ಡಿಮ್ಯಾಂಡ್ ಮಾಡುತ್ತಿರುವುದು ಅಡ್ವಾನ್ಸ್ ಟ್ಯಾಕ್ಸ್ ಆದರ ಮೇಲೆ 5 ಪರ್ಸೆಂಟ್ ಪೆನಾಲ್ಟಿ ಕೊಡಬೇಕೆನ್ನುವುದು ಧರ್ಮವಲ್ಲ, ನ್ಯಾಯವಲ್ಲ. ಇನ್‌ಕಂಟ್ಯಾಕ್ಸ್‌ನವರೂ ಕೂಡ ಟೈಂ ಕೊಟ್ಟು, ನೋಟೀಸ್ ಕೊಟ್ಟು ಆಗಲೂ ಕೊಡದೇ ಹೋದ ಪಕ್ಷದಲ್ಲಿ ಪೆನಾಲ್ಟಿ ಹಾಕುತ್ತಾರೆ. ಈಗ ನೋಡಿದ್ದರಲ್ಲಿ ಪೆನಾಲ್ಟಿ ಹಾಕಿದ ಮೇಲೆ ಪ್ರಾಪರ್ಟಿ ಟ್ಯಾಕ್ಸ್ ಕಲೆಕ್ಷನ್ ಕಡಿಮೆಯಾಗುತ್ತಾ ಇದೆ. ಇದಕ್ಕೆ ಕಾರಣವೇನೆಂದರೆ ಹೊರಗಡೆ ಎರಾ ದರೂ ಸಾಲ ತೆಗೆದುಕೊಂಡರು ಯಾವ ಬ್ಯಾಂಕಿನಲ್ಲೇ ಆಗಲಿ 10 ಪರ್ಸೆಂಟ್‌ಗಿಂತ ಕಡಿಮೆ ಇಲ್ಲ ಆದ್ದರಿಂದ ಇದಕ್ಕೆ ಕೊಡಬೇಕಾಗಿರುವುದು 5 ಪರ್ಸೆಂಟ್ ತಾನೇ ನಿಧಾನವಾಗಿ ಕೊಡೋಣ ಅಂತ ಹೇಳಿ ಅನೇಕ ವರ್ತಕರು ವ್ಯಾಪಾರ ದೃಷ್ಟಿಯಿಂದ ಟ್ಯಾಕ್ಸನ್ನು ಕೊಡುತ್ತಾ ಇಲ್ಲ. ಆದ್ದರಿಂದ ಈ ಪೆನಾಲ್ಟಿ ಕ್ಲಾಸ್ ಹೋಗಬೇಕು, 6 ತಿಂಗಳಾದಮೇಲೆ ಕೊಡದಿದ್ದರೆ ಪೆನಾಲ್ಟಿ ಹಾಕಬೇಕೇ ಹೊರತು ಪ್ರಾರಂಭದಲ್ಲಿಯೇ ಹಾಕುವುದು ನ್ಯಾಯವಲ್ಲ, ಇದರ ಬಗ್ಗೆ ಒಂದು ತಿದ್ದುಪಡಿಯನ್ನು ಕೊಟ್ಟಿದ್ದೇನೆ ಇದನ್ನು ಪರಿಶೀಲನೆ ಮಾಡ ಬೇಕೆಂದು ಹೇಳುತ್ತೇನೆ.

(ಶ್ರೀ ಟಿ. ಆರ್. ಶಾಮಣ್ಣ)

3-00 P.M.

ಕ್ಲಾಸ್ 10 ಬಹಳ ದೀರ್ಘವಾಗಿ ಚರ್ಚೆಯಾಗಿದೆ, ನನಗೆ ತಿಳಿದಮಟ್ಟಿಗೆ ಇದಕ್ಕೆ ಕಾರಣ ಇಷ್ಟೆ. ಬೆಂಗಳೂರು ನಗರ ಕಾರ್ಪೊರೇಷನ್‌ನ ಮನೆಗಳು ಸುಮಾರು ಎರಡು ಸಾವಿರ ಮನೆಗಳು ಇವೆ. ಅವನ್ನು ಬಹಳ ಕಡಿಮೆ ಬಾಡಿಗೆಗೆ ಕೊಟ್ಟಿದ್ದಾರೆ. ಮತ್ತು ಲೀಸ್ ಮಾಡಿರತಕ್ಕ ಮನೆಗಳು ಅನೇಕವು ಇವೆ. ಅವುಗಳ ಬಗ್ಗೆ ಈ ಒಂದು ಕ್ಲಾಸನ್ನು ತಂದಿದ್ದಾರೆ ಎಂದು ಕಾಣುತ್ತದೆ. ಇದರಿಂದ ಅನೇಕರಿಗೆ ತೊಂದರೆಯಾಗುತ್ತದೆ, ಏಕೆಂದರೆ ಮನೆ ಬಾಡಿಗೆಯನ್ನು ಹೆಚ್ಚುಮಾಡುವ ಉದ್ದೇಶದಿಂದ ಮನೆ ಮಾಲೀಕರು ಕಾರ್ಪೊರೇಷನ್ ಟ್ಯಾಕ್ಸ್ ಇನ್‌ಸ್ಪೆಕ್ಟರಿಗೆ ಹೇಳಿ ಮನೆ ಕಂದಾಯವನ್ನು ಹೆಚ್ಚಿಸಿ ಅದರ ಮುಖಾಂತರ ಮನೆ ಬಾಡಿಗೆಯನ್ನು ಹೆಚ್ಚು ಮಾಡಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಇದರಿಂದ ಜನಗಳಿಗೆ ಅನುಕೂಲವಾಗುವುದಿಲ್ಲ ಎಂದು ನನ್ನ ಭಾವನೆ. ಕಾರ್ಪೊರೇಷನ್‌ಗೆ ಸೇರಿರತಕ್ಕ ಮನೆಗಳಿಂದ ಅವರಿಗೆ ಬರತಕ್ಕ ವರಮಾನ ಒಂದು ಲಕ್ಷ 35 ಸಾವಿರ ರೂಪಾಯಿ ಅದರಿಂದ ಆಗತಕ್ಕ ಖರ್ಚು 1 ಲಕ್ಷ 20 ಸಾವಿರ ರೂಪಾಯಿ. ಆದ್ದರಿಂದ ಕ್ಲಾಸ್ 10ರ ಔಚಿತ್ಯವೇನೂ ಕಾಣಲಿಲ್ಲ ಎಂದು ಹೇಳಬಯಸುತ್ತೇನೆ.

ಕ್ಲಾಸ್ 8 ಅಂತ ಹೇಳಿ ಒಂದನ್ನು ಸೇರಿಸಿದ್ದೀರಿ. ಎಲೆಕ್ಟೊರಲ್ ರೋಲ್‌ನ್ನು ತಯಾರು ಮಾಡಬೇಕು ಎಂದು ಹೇಳುತ್ತೀರಿ. ಇದುವರೆಗೂ ಅಸೆಂಬ್ಲಿ ಎಲೆಕ್ಟೊರಲ್ ರೋಲನ್ನೇ ಇದಕ್ಕೂ ಉಪಯೋಗ ಮಾಡುತ್ತಾ ಇದ್ದಿರಿ, ಇನ್ನು ಮುಂದೆ ಹೊಸದಾಗಿ ತಯಾರು ಮಾಡಬೇಕೆಂದಿರುವುದು ಸ್ವಾಗತಾರ್ಹವಾದದ್ದು. ಏಕೆಂದರೆ ಅಸೆಂಬ್ಲಿ ಲಿಸ್ಟ್‌ನಲ್ಲಿ ಅನೇಕ ಲೋಪದೋಷಗಳು ಇರುತ್ತಾ ಇದ್ದವು, ಗಂಡಸರಿಗೆ ಬದಲು ಹೆಂಗಸರನ್ನು ಹಾಕಿರುತ್ತಾ ಇದ್ದರು, ವಯಸ್ಸಾದವರು ಇದ್ದ ಕಡೆ ಮಕ್ಕಳನ್ನು ಹಾಕಿರುತ್ತಾ ಇದ್ದರು. ಮನೆ ಮನೆಗಳನ್ನು, ಬೀದಿ ಬೀದಿಗಳನ್ನೇ ಬಿಟ್ಟಿರುತ್ತಾ ಇದ್ದರು. ಕಾಟಾಚಾರಕ್ಕೆ ಬರೆದುಕೊಂಡು ಹೋಗಿರುತ್ತಿದ್ದರು. 4-5 ಸಂಸಾರಗಳು ಇರುವ ಕಡೆ ಒಂದು ಸಂಸಾರದ ಲೆಕ್ಕಾಚಾರ ಬರೆದುಕೊಂಡು ಹೋಗಿರುವ ಸಂದರ್ಭ ಇದೆ. ಇದನ್ನೆಲ್ಲಾ ಗಮನಕ್ಕೆ ತೆಗೆದುಕೊಂಡು ತಪ್ಪಿಲ್ಲದಂತೆ ಎಲೆಕ್ಟೊರಲ್ ರೋಲ್ ತಯಾರು ಮಾಡುವುದು ಬಹಳ ಅವಶ್ಯಕ ಎಂದು ಹೇಳುತ್ತೇನೆ.

ಇನ್ನೊಂದು ಅತಿ ಮುಖ್ಯವಾದ ವಿಷಯವೇನೆಂದರೆ ಬೆಂಗಳೂರು ನಗರದಲ್ಲಿ ಸುಮಾರು 63 ಡಿವಿಜನ್‌ಗಳು ಇವೆ. ಈ ಡಿವಿಜನ್‌ಗಳನ್ನು ಕಾರ್ವ್‌ಔಟ್ ಮಾಡುವುದು ಕಾಂಗ್ರೆಸ್ ಆಫೀಸಿನಲ್ಲಿ. ಆದ್ದರಿಂದ ದಯವಿಟ್ಟು ಈ ಸಾರಿ ಎಲೆಕ್ಟೊರಲ್ ರೋಲ್‌ನ್ನು ತಯಾರುಮಾಡುವಾಗ ಮತ್ತು ಡಿವಿಜನ್‌ಗಳನ್ನು ಸ್ವಾರ್ವ್‌ಔಟ್ ಮಾಡುವಾಗ ಕಾಂಗ್ರೆಸ್ ಆಫೀಸಿನಲ್ಲಿ ಮಾಡಬೇಕು. ಅಧಿಕಾರಿಗಳು ನಿಷ್ಪಕ್ಷಪಾತವಾಗಿ ಇದನ್ನು ಮಾಡುವಂತೆ ಮಾಡಲು ಸಾಕಾದಷ್ಟು ಎಚ್ಚರಿಕೆಯನ್ನು ತೆಗೆದುಕೊಳ್ಳಿ. ನನಗೆ ಗೊತ್ತಿದೆ. ಇದನ್ನು ಯಾವ ರೀತಿ ಮಾಡುತ್ತಾರೆ ಎಂಬುದು ಏಕೆಂದರೆ ನಾನು ಕಾಂಗ್ರೆಸ್ಸಿನಲ್ಲಿ ಇದ್ದವನು. ಎಲೆಕ್ಟೊರಲ್ ರೋಲ್ ಅಲ್ಲಿ ಹೇಗೆ ತಯಾರಾಗುತ್ತಾ ಇತ್ತು ಎಂಬುದನ್ನು ಬೇಕಾದರೆ ನಾನು ಪ್ರಮಾಣಮಾಡಿ ಹೇಳುತ್ತೇನೆ. ಒಂದು ನ್ಯಾಚುರಲ್ ರೀಜನ್ ತೆಗೆದುಕೊಂಡು ಅದಕ್ಕೆ ತಕ್ಕಂತೆ ಡಿವಿಜನ್‌ಗಳನ್ನು ಮಾಡಬೇಕು. ಕಾಂಗ್ರೆಸ್‌ನವರಿಗೆ ಅನುಕೂಲವಾಗುವ ರೀತಿಯಲ್ಲಿ ಡಿವಿಜನ್‌ಗಳನ್ನು ಮಾಡಬೇಡಿ ಎಂದು ಹೇಳುತ್ತೇನೆ. ಹೋದ ಸಾರಿ ಕಾಂಗ್ರೆಸ್‌ನವರು ಗೆಲ್ಲಬೇಕೆಂದು ಹೇಳಿ ಒಂದು ಕಡೆ 34 ಹಳ್ಳಿಗಳನ್ನು ಅದಕ್ಕೆ ಸೇರಿಸಿದರು. ಎರಡನೆಯದಾಗಿ ಒಂದೊಂದು ಡಿವಿಜನ್‌ನಲ್ಲೂ ಇರತಕ್ಕ ಜನಸಂಖ್ಯೆ ಬಹಳ ವ್ಯತ್ಯಾಸ ಇದೆ. 1964ರಲ್ಲಿ ಜಯನಗರದ ಎಲೆಕ್ಟೊರಲ್ ರೋಲ್‌ನಲ್ಲಿ 21 ಸಾವಿರ ಜನ ಇದ್ದರು, 310 ಜನ ಎಲೆಕ್ಟೊರಲ್ ರೋಲ್‌ನಲ್ಲಿ ಇದ್ದಾರೆ. ಮ್ಯಾಕ್ ಐವರ್ ಟೌನಿನಲ್ಲಿ 6,321, ಶಿವನ್ ಚೆಟ್ಟಿಗಾರ್ಡನ್ 6,326, ಮರ್ಫಿಟೌನ್ 7,685 ಹೀಗೆ ಒಂದೊಂದು ಕಡೆ ಒಂದೊಂದು ರೀತಿಯಲ್ಲಿ ಬಹಳ ವ್ಯತ್ಯಾಸ ಇದೆ. ಸಾಧ್ಯವಾದಮಟ್ಟಿಗೂ ಈಕ್ವಲ್ ಡಿವಿಜನ್‌ಗಳನ್ನು ಮಾಡುವುದು ಒಳ್ಳೆಯದು ಎಂದು ಹೇಳುತ್ತೇನೆ. ಕಾರ್ಪೊರೇಷನ್ ಎಲೆಕ್ಷನ್‌ಗಳು ಸುಗಮವಾಗಿ ಇಲ್ಲಿ ನಡೆಯಬೇಕಾದುದು ಮುಖ್ಯ. ಬೆಂಗಳೂರು ಇಡೀ ಭಾರತದಲ್ಲೇ ಬಹಳ ಸುಂದರವಾದ ನಗರ ಹಾಗೂ ಅತಿ ಮುಖ್ಯವಾದ ನಗರ. ಇಲ್ಲಿ ನಡೆಯತಕ್ಕ ಕಾರ್ಯಗಳು ಇಡೀ ರಾಜ್ಯಕ್ಕೂ ಮತ್ತು ಸರ್ಕಾರಕ್ಕೂ ಒಂದು ಒಳ್ಳೆಯ ಹೆಸರನ್ನು ತರುವಂತೆ ಇದ್ದರೆ ಸಾಕೆಂದು ಹೇಳಿ ನನಗೆ ಇಷ್ಟು ಮಾತನಾಡುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನು ಸಿ, ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

†ಶ್ರೀ ಎ. ನಂಜಪ್ಪ (ಶಾಂತಿನಗರ).—ಮಾನ್ಯ ಅಧ್ಯಕ್ಷರೇ: ಮಾನ್ಯ ಮಂತ್ರಿಗಳು ಈಗ ಸಭೆಯ ಮುಂದೆ ಮಂಡಿಸಿರತಕ್ಕ ಬೆಂಗಳೂರು ಕಾರ್ಪೊರೇಷನ್ ಅಮೆಂಡ್‌ಮೆಂಟ್ ಬಿಲ್ಲನ್ನು ಸ್ವಾಗತಿಸುತ್ತಾ ಎರಡು ಮಾತುಗಳನ್ನು ಹೇಳಬಯಸುತ್ತೇನೆ.

ಮಾನ್ಯ ಶಾಮಣ್ಣನವರು ಮಾತನಾಡುತ್ತ ಸರ್ಕಾರದವರು ಕಾರ್ಪೊರೇಷನ್ ಆಡಳಿತವನ್ನು ಸೂಪರ್‌ಸೀಡ್ ಮಾಡಬಾರದಾಗಿತ್ತು, ಆದರೆ ಒಂದು ರಾಜಕೀಯಕ್ಕಾಗಿ ಆದನ್ನು ಸೂಪರ್‌ಸೀಡ್ ಮಾಡಿದರು, ಅದನ್ನು ನಾನು ಪ್ರಮಾಣಬೇಕಾದರೂ ಮಾಡಿ ಹೇಳು ಎಂದರೆ ಹೇಳುತ್ತೇನೆ ಎಂದು ಹೇಳಿದರು. ಆದರೆ ಅವರು ಯಾವ ಪ್ರಮಾಣವನ್ನೂ ಮಾಡಲಿಲ್ಲ, ನಾನೂ ಮತ್ತು ಅವರೂ ಇಬ್ಬರೂ ಒಂದೇ ಗರಡಿಯಲ್ಲಿ ತಯಾರಾದವರು. ಅವರೂ ನಾನೂ ಇಬ್ಬರೂ ಕಳೆದ ಹತ್ತಾರು ವರ್ಷಗಳಿಂದ ಕಾರ್ಪೊರೇಷನ್ ಆಡಳಿತದಲ್ಲಿ ಸೇರಿರುತ್ತೇವೆ. 1965ರಲ್ಲಿ ಕಾರ್ಪೊರೇಷನ್ ಆಡಳಿತ ಕಾಂಗ್ರೆಸ್ಸಿನವರ ಕೈಗೆ ಸಿಕ್ಕಿದ್ದರೂ ಆಗ ಕಾಂಗ್ರೆಸೇತರ ಪಕ್ಷಕ್ಕೆ ಸೇರಿದ್ದ ಶ್ರೀಮಾನ್ ನಾಗಣ್ಣನವರು ಅಧ್ಯಕ್ಷರಾದರು. ಆಗ ಕಾಂಗ್ರೆಸ್ಸಿನಲ್ಲಿ 24 ಜನ ಸದಸ್ಯರಿದ್ದರು. ಅಧ್ಯಕ್ಷರು ಕಾಂಗ್ರೆಸ್ ಪಕ್ಷದ ವಿರೋಧಿಗಳಾಗಿದ್ದುದರಿಂದ ಆಗ ಕಾಂಗ್ರೆಸ್ ಸದಸ್ಯರಿಗೆ ಅಲ್ಲಿ ಬಹಳ ಕಿರುಕುಳವನ್ನು ಕೊಡಲಾಯಿತು. ಆದಾಗ್ಯೂ ನಾವು ಆಗ ಏನೋ ಒಂದು ರೀತಿಯಲ್ಲಿ ಆಡಳಿತ ನಡೆಸಿಕೊಂಡು ಬಂದೆವು. ಆದರೆ ಕಾರ್ಪೊರೇಷನ್ ಆಡಳಿತ ವಿರೋಧಿ ಪಕ್ಷಗಳಿಗೆ ಸಿಕ್ಕಿದ್ದಾಗಿ ಅಲ್ಲಿ ಅದರ ಆಡಳಿತವನ್ನು ಸರ್ಕಾರದವರು ಸೂಪರ್‌ಸೀಡ್ ಮಾಡಲಿಲ್ಲ. ಆ ಆಡಳಿತ ಕಾಂಗ್ರೆಸ್ಸಿನವರ ಕೈಗೆ ಸಿಕ್ಕಿದ್ದಾಗ ಅಲ್ಲಿ ಆಡಳಿತವನ್ನು ಸರ್ಕಾರದವರು ಸೂಪರ್‌ಸೀಡ್ ಮಾಡಿದರು. ಹಾಗೆ ಸೂಪರ್‌ಸೀಡ್ ಮಾಡುವುದಕ್ಕೆ ಮುನ್ನ ಸಂಬಂಧಪಟ್ಟ ಎಲ್ಲ ಕೌನ್‌ಸಿಲರುಗಳಿಗೂ ಸರ್ಕಾರದವರು ಕ್ರಮವಾಗಿ ನೋಟಿನನ್ನು ಕೊಟ್ಟು ಅವರ ಸಮಾಧಾನವನ್ನು ಕೇಳಿ ಅದು ಸರ್ಕಾರಕ್ಕೆ ಸರಿಕಾಣದೆ ಇದ್ದ ಕಾರಣ ಅವರು ಅದನ್ನು ಸೂಪರ್‌ಸೀಡ್ ಮಾಡಿದರು. ಆದ್ದರಿಂದ ಅದರಲ್ಲಿ ಸರ್ಕಾರದವರ ತಪ್ಪೇನೂ ಇರುವುದಿಲ್ಲ. ಅಲ್ಲಿ ಯಾರು ನಮಗೆ ಓಟನ್ನು ಕೊಟ್ಟು ಕಳುಹಿಸಿದ್ದರೋ ಅವರು ಅವರ ಕೆಲಸಕಾರ್ಯಗಳು ಸರಿಯಾಗಿ ನಡೆಯುದೆ ಇದ್ದ ಕಾರಣ ಅವರು ಕೌನ್‌ಸಿಲರುಗಳ ಮರ್ಯಾದೆಯನ್ನು ಕಳೆಯುವುದಕ್ಕೆ ಪ್ರಾರಂಭ ಮಾಡಿದರು. ಆದ್ದರಿಂದ ಸರ್ಕಾರ ಮುಂದೆ ಬರಲೇ ಬೇಕಾಯಿತು. ಒಳ ವಿಷಯಗಳು ಹೀಗಿರುವಾಗ ಸರ್ಕಾರವನ್ನು ನಾವೇತಕ್ಕೆ ದೂಷಣೆ ಮಾಡಬೇಕು? 1966ರಲ್ಲಿ ಕಾರ್ಪೊರೇಷನ್ ವಿಂಟಿಂಗ್ ನಡೆಸುವುದಕ್ಕೇ ಅಲ್ಲಿ ವಿರೋಧ ಪಕ್ಷಗಳ ಸದಸ್ಯರು ಅವಕಾಶ ಕೊಡದೆ ಬಹಳ ತೊಂದರೆ ಕೊಟ್ಟರು. ಜನರಿಗೆ ದೊರೆಯಬೇಕಾದ ಅನುಕೂಲಗಳು ದೊರೆಯಲಿಲ್ಲ. ಆಗ ಸರ್ಕಾರದವರು ಆಡಳಿತ ನಡೆಸುತ್ತಿದ್ದ ಕಾರ್ಪೊರೇಟರುಗಳಿಗೆ ನೋಟೀಸನ್ನು ಕೊಟ್ಟು ಆನಂತರ ಸೂಪರ್‌ಸೀಡ್ ಮಾಡಿದ್ದಾರೆ. ಅದರಲ್ಲಿ ಸರ್ಕಾರದವರ ತಪ್ಪೇನೂ ಇಲ್ಲ. ಆದ್ದರಿಂದ ಶ್ರೀಮಾನ್ ಶ್ಯಾಮಣ್ಣನವರು ಸರ್ಕಾರದವರನ್ನು ದೂಷಣೆ ಮಾಡತಕ್ಕದ್ದು ಸಾಧುವಾದ್ದಲ್ಲ. ಅಲ್ಲಿ ಆಗ ಯಾರು ಯಾರು ಕಾರ್ಪೊರೇಟರುಗಳಾಗಿದ್ದರೋ ಅವರೇ ಒಬ್ಬರಿಗೊಬ್ಬರು ಅಲ್ಲಿ ಗುದ್ದಾಡುವುದಕ್ಕೆ ಪ್ರಾರಂಭವಾಯಿತು. ಅದು ತೀರಾ ನಾಚಿಗೆಗೇಡಾದದ್ದು. ಅದಕ್ಕಾಗಿ ಅದನ್ನು ಎಳೆಯಿಲ್ಲದೆ ಸೂಪರ್‌ಸೀಡ್ ಮಾಡಬೇಕಾಯಿತು. ಅಷ್ಟೇ ವಿನಾ ಅದರಲ್ಲಿ ಯಾವ ರಾಜಕೀಯವೂ ಇಲ್ಲ. ಅದಕ್ಕೆಲ್ಲಾ ಕಾರಣರು ಆಗಿದ್ದ ಕೌನ್‌ಸಿಲರುಗಳೇ. ಆದರೆ ಅಲ್ಲಿ ಈ ದಿವಸ ಅಧಿಕಾರಿಗಳನ್ನು ಆಡಳಿತ ನಡೆಸುವುದಕ್ಕೆ ಇಟ್ಟಿರುವುದರಿಂದ ನಾಗರೀಕರಿಗೆ ಬಹಳ ತೊಂದರೆಯಾಗಿದೆ. ಅದನ್ನು ನಾನೂ ಒಪ್ಪುತ್ತೇನೆ. ಅದಕ್ಕಾಗೇ ಈಗ ಸರ್ಕಾರದವರು ಈ ತಿದ್ದುಪಡಿಯನ್ನು ತಂದಿದ್ದಾರೆ. ನಾನು ಆ ಶಾಂತಿನಗರದಲ್ಲಿ ಎಲ್ಲಾ ಹೆಣ್ಣುಮಕ್ಕಳಿಗೂ ಅನುಕೂಲವಾಗುವಂತೆ ಒಂದು ಗರ್ಲ್ಸ್ ಹೈಸ್ಕೂಲಿಗೆ ಕಟ್ಟಡ ಕಟ್ಟಿಸಲು ಎಷ್ಟೋ ಪ್ರಯತ್ನ ಮಾಡಿದೆ. ಅದಕ್ಕೆ ಅಲ್ಲಿದ್ದ ವಿರೋಧಪಕ್ಷದ ಸದಸ್ಯರುಗಳು ಅವಕಾಶ ಕೊಡಲಿಲ್ಲ. ಹೀಗಾಗಿ ಅಲ್ಲಿ 1965ರಿಂದಲೂ ಕಟ್ಟಡವಾಗದೆ ಇರುವುದಕ್ಕೆ ಅವಕಾಶವಾಗುತ್ತಿಲ್ಲ ಇತ್ತೀಚೆಗೆ ಕಳೆದ 2 ವರ್ಷಗಳಿಂದ ಅನೇಕ ಕಡೆಗಳಲ್ಲಿ ಕುಡಿಯುವ ನೀರಿನ ನಲ್ಲಿಗಳನ್ನು ಮುಚ್ಚಿಸಿದ್ದಾರೆ. ಹಾಲಿ ಇರತಕ್ಕ ಅಧಿಕಾರಿಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಪ್ರಜೆಗಳಿಗೆ ಅನುಕೂಲಗಳು ಸಿಗುತ್ತಿಲ್ಲ. ಕಾರ್ಪೊರೇಷನ್ ಸರಿಯಾಗಿ ಕೆಲಸ ನಡೆಸುತ್ತಿಲ್ಲ. ಶ್ಯಾಮಣ್ಣನವರು ಜನರಿಗೆ ಬಹಳ ತೊಂದರೆಯಾಗುತ್ತಿದೆ ಎಂದು ಹೇಳುತ್ತಿರುವುದು ನಿಜ. ಅದನ್ನು ನಾನೂ ಕೂಡ ಒಪ್ಪುತ್ತೇನೆ. ಅಲ್ಲಿಗೆ ಒಳ್ಳೆಯ ಅಧಿಕಾರಿಗಳನ್ನು ತರಬೇಕೆಂದು ಶ್ರೀಮಾನ್ ಶ್ಯಾಮಣ್ಣನವರು ಹೇಳಿದ್ದು ನ್ಯಾಯವಾಗಿದೆ. ಅವರು ಹೇಳತಕದ್ದೆಲ್ಲಾ ಸರಿಯೇ. ಆದರೆ ಸರ್ಕಾರದವರು ರಾಜಕೀಯ ಕಾರಣದಿಂದ ಅದನ್ನು ಸೂಪರ್‌ಸೀಡ್ ಮಾಡಿದರು ಅನ್ನುವುದನ್ನು ನಾನು ಒಪ್ಪುವುದಿಲ್ಲ. ನಾವು ಎಲ್ಲರೂ ಮೊದಲು ರೂಲ್ಸ್ ಕಾನೂನುಗಳನ್ನು ಅನುಸರಿಸಿ ನಡೆಯೋಣ. ಜನರಿಗೆ ಅದಷ್ಟೂ ಅನುಕೂಲಗಳನ್ನು ಮಾಡೋಣ; ಅದನ್ನು ಕೈಬಿಟ್ಟು ಸರ್ಕಾರವನ್ನು ಸುಮ್ಮನೆ ದೂಷಣೆ ಮಾಡುತ್ತಿದ್ದರೆ ಅದು ಪ್ರಯೋಜನವಾದುದಲ್ಲ ಎಂದು ಹೇಳುತ್ತೇನೆ. ಇನ್ನು ಶ್ರೀಮಾನ್ ಶ್ಯಾಮಣ್ಣನವರು ಕಾರ್ಪೊರೇ

(ಶ್ರೀ ಎ. ನಂಜಪ್ಪ)

ಷನ್ನಿಗೆ ಸೇರಿದ ಕೆಲವು ಅಂಗಡಿಗಳನ್ನು ಬಾಡಿಗೆಗೆ ಕೊಡತಕ್ಕ ವಿಚಾರದಲ್ಲಿ ಬಹಳ ಕಡಮೆ ಬಾಡಿಗ್ಗೆ ಕೊಟ್ಟರು ಅವನ್ನು ಇನ್ನೂ ಹೆಚ್ಚಿನ ಬಾಡಿಗ್ಗೆ ಕೊಡತಕ್ಕ ಅವಕಾಶವಿತ್ತು ಎಂದು ವಾದ ಮಾಡಿದ್ದಾರೆ. ಅವನ್ನು ನಾನು ಒಪ್ಪುವುದಿಲ್ಲ. ನಮ್ಮ ಆ ರೂಲ್ಸಿನಲ್ಲಿ ಒಂದು ಕಡೆ ಆ ಬಾಡಿಗೆಯನ್ನು ರಾಟೆರಿ ಮೂಲಕ ನಿರ್ಧರಿಸಬಹುದು ಎಂದಿದೆ. ಅದರಂತೆ ಅದನ್ನು ಮಾಡಲಾಗಿದೆ. ಆದರೆ ಹಿಂದೆ ಶ್ರೀಮಾನ್ ಶ್ಯಾಮಣ್ಣನವರು ಅಲ್ಲಿ ಕೌನ್‌ಸಿಲರಾಗಿದ್ದಾಗ ಅಲ್ಲಿ ಇವರ ಅಡಳಿತವಿದ್ದ ಕಾಲದಲ್ಲಿ ಇವರು ಯಾವ ರೂಲ್ಸ್ ರೆಗ್ಯುಲೇಷನ್ ಇಲ್ಲದೆ ಅವರ ಪಾರ್ಟಿಗೆ ಅವರಿಗೆ ಬೇಕಾದವರಿಗೆ ಆ ಮನೆಗಳನ್ನು ಕೊಟ್ಟರು. ಅಲ್ಲ ಅಡಳಿತದಲ್ಲಿ ಬಿಗಿ ತಪ್ಪಿ ಕೆಲಸಗಳು ಅದ್ದರಾರಿಗೆ ಹೊರಟಿದ್ದರಿಂದ ಸರ್ಕಾರದವರು ಸೂಪರ್‌ಸೀಡ್ ಮಾಡಿದರು. ಅವರು ಹೇಳಿದಹಾಗೆ ಎಲ್ಲರೂ ರಾಜಕೀಯದಿಂದ ದೂರವಿದ್ದು ಅಲ್ಲಿ ಜನರಿಗೇನು ಅನುಕೂಲವಾಗಬೇಕು ಎಂಬುದನ್ನು ಅಷ್ಟೇ ತಮ್ಮ ಗಮನದಲ್ಲಿ ಇಟ್ಟುಕೊಂಡು ಕೆಲಸ ಮಾಡಿದರೆ ಅಲ್ಲಿ ಒಂದು ಪಾಠಶಾಲೆ—ಒಂದು ಆಸ್ಪತ್ರೆ ಇತ್ಯಾದಿಗಳನ್ನು ಮಾಡಿ ಜನಕ್ಕೆ ಅನುಕೂಲತೆಯನ್ನು ಮಾಡಿಕೊಡೋಣ. ಅಂದಾಗ ಯಾರೂ ರಾಜಕೀಯಕ್ಕೆ ಕೈ ಹಾಕಬಾರದು. ಆಗ ಎಲ್ಲವೂ ಸರಿಯಾಗಿ ನಡೆಯುತ್ತವೆ. ಆಗ ಸರ್ಕಾರವನ್ನು ನಾವು ಟೀಕೆ ಮಾಡಬೇಕಾದ ಪ್ರಮೇಯವೇ ಬರುವುದಿಲ್ಲ. ಇಷ್ಟು ಮಾತನ್ನು ಹೇಳುವುದಕ್ಕೆ ನನಗೆ ಅಧ್ಯಕ್ಷರು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಸಭಾಪತಿಗಳೇ: ಈಗ ಈ ಬಿಲ್ಲನ್ನು ತಂದಿರತಕ್ಕ ವಿಧಾನದ ಬಗ್ಗೆ ಹಾಗೂ ಇದರಲ್ಲಿ ಅಡಕವಾಗಿರತಕ್ಕ ಅಂಶಗಳ ಬಗ್ಗೆ ಮತ್ತು ಹಿಂದೆ ಇದೇ ಬಿಲ್ಲುಗಳನ್ನು ಯಾವ ರೂಪದಲ್ಲಿ ತರಲಾಗುತ್ತಿತ್ತು ಅನ್ನುವುದರ ವಿಚಾರವಾಗಿ ನಾನು ಎರಡು ಮಾತುಗಳನ್ನಾಡಬೇಕಾಗಿದೆ.

ಈ ಹಿಂದೆ ನನಗೆ ತಿಳಿದಿರುವ ಹಾಗೆ ಯಾವ ಯಾವ ಕ್ಲಾಜುಗಳನ್ನು ತಿದ್ದುಪಡಿ ಮಾಡಲಾಗುತ್ತದೆಯೋ ಆ ಕ್ಲಾಜುಗಳ ಒರಿಜಿನರ್ ಸೆಕ್ಷನ್‌ಗಳು ಯಾವ ರೂಪದಲ್ಲಿದ್ದವು ಎಂಬುದನ್ನು ಆ ತಿದ್ದುಪಡಿಯಾದ ಕ್ಲಾಜಿನ ಪಕ್ಕದಲ್ಲೆ ಪ್ರಿಂಟ್ ಮಾಡುತ್ತಿದ್ದರು. ಆದರೆ ಈಗ ಸಭೆಯ ಮುಂದೆ ಇಟ್ಟಿರತಕ್ಕ ಬಿಲ್ಲಿನಲ್ಲಿ ಯಾವ ಯಾವ ತಿದ್ದುಪಡಿಯಾದ ಕ್ಲಾಜುಗಳಿವೆಯೋ ಅವುಗಳಿಗೆ ಒರಿಜಿನರ್ ಕ್ಲಾಜುಗಳನ್ನು ಇಲ್ಲಿ ಸೂಚಿನದೆ ಇರತಕದ್ದು ಒಂದು ಲೋಪವೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇದರಿಂದ ನಮಗೆ ಯಾವ ಕಾರ್ಯಕಾರಿ ಇವುಗಳನ್ನು ತಿದ್ದುಪಡಿ ಮಾಡಿದರು ಅನ್ನುವುದು ಗೊತ್ತಾಗುವುದಿಲ್ಲ. ಉದಾಹರಣೆಗೆ ಇಲ್ಲಿ ಕ್ಲಾಜ್ 47 (ಎಸಿ) ನಲ್ಲಿ ಕಾರ್ಪೊರೇಷನ್ ಸೂಪರ್‌ಸೀಡ್ ಆಗತಕ್ಕ ಅವಧಿಯನ್ನು ಕರ್ಟೈಲ್ ಮಾಡಬೇಕು ಎಂದು ಇಲ್ಲಿದೆ. ಆದರೆ ಅದರ ಒರಿಜಿನಲ್ ಸೆಕ್ಷನ್‌ನಲ್ಲಿ ಏನಿತ್ತು? ಅದನ್ನು ಇಲ್ಲಿ ಏತಕ್ಕೆ ಪ್ರಿಂಟ್ ಮಾಡಲಿಲ್ಲ. ಅದನ್ನು ರೂಲ್ಸಿನಲ್ಲಿಯೂ ಸ್ಪಷ್ಟವಾಗಿ ಹೇಳಿಲ್ಲ. ಆದರೆ ಪರಂಪರೆಯಾಗಿ ನಡೆದುಕೊಂಡು ಬರುತ್ತಿದ್ದ ಪದ್ಧತಿಯನ್ನು ಏಕೆ ಈ ದಿವಸ ಬದಲಾಯಿಸಿದರು? ಇದರ ಬಗ್ಗೆ ಸರ್ಕಾರದವರು ಸಭೆಗೆ ಒಂದು ವಿವರಣೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮೊನ್ನೆ ಬೆಂಗಳೂರು ಕಾರ್ಪೊರೇಷನ್ ಆಕ್ಟ್ ಪ್ರಿಂಟ್ ಮಾಡಿದ್ದಾರೆ. ಅವು ಇನ್ನೂ ನಮ್ಮ ಕೈಗೆ ಸೇರಿಲ್ಲ. 1949ರಿಂದ 1968ರವರೆಗೆ ಏನೇನು ತಿದ್ದುಪಡಿಗಳು ಆಗಿವೆಯೋ ಅದನ್ನು ತಿಳಿದುಕೊಳ್ಳುವುದಕ್ಕೆ ಬಹಳ ಕಷ್ಟವಾಗಿದೆ. ಅದು ಬೇರೆ ಬೇರೆ ಕಡೆಗಳಲ್ಲಿ ಇರುತ್ತದೆ. ರೂಲ್ಸಿಗೆ ಸರಿಯಾಗಿ ಮಾಡದಿದ್ದರೆ ಅದು ರೂಲ್ಸಿಗೆ ವಿರೋಧವಾಗುತ್ತದೆ. ಆದ್ದರಿಂದ ಮಾನ್ಯ ಮಂತ್ರಿಗಳು ಇದನ್ನು ಗಮನಿಸಬೇಕು.

ಎರಡನೆಯ ವಿಷಯ. ಈ ಮಸೂದೆಯಲ್ಲಿ ಮಾನ್ಯ ಮಂತ್ರಿಗಳು ಹೇಳಿರುವುದು 3 ವಿಚಾರಗಳು. ಒಂದು, ಬೆಂಗಳೂರು ಕಾರ್ಪೊರೇಷನ್ ಸೂಪರ್‌ಸೀಡ್ ಆಗಿದೆ, ಅದರ ಪೀರಿಯಡ್ಡನ್ನು ಕಡಿಮೆಮಾಡುವುದು. ಎರಡು, ಕಾರ್ಪೊರೇಷನ್ನಿನವರು ಎಲೆಕ್ಟೊರಲ್ ರೋಲ್ಸ್ ಸಿದ್ಧಗೊಳಿಸುವುದು, ಮತ್ತು ಮೂರು, ಅಪ್ಪೋರ್ಷನ್‌ಮೆಂಟ್ ಆಫ್ ಪ್ರಾಪರ್ಟಿ ಟ್ಯಾಕ್ಸ್. ಬೆಂಗಳೂರು ಕಾರ್ಪೊರೇಷನ್ ಸೂಪರ್‌ಸೀಡ್ ಮಾಡಿರುವುದು ಸರಿಯಾದುದಲ್ಲವೆನ್ನುವುದನ್ನು ಸರ್ಕಾರದವರೇ ಒಪ್ಪಿಕೊಂಡು ಅದನ್ನು ಈಗ ತೆಗೆದುಹಾಕಬೇಕೆಂಬ ಉದ್ದೇಶದಿಂದ ಈ ಮಸೂದೆಯನ್ನು ತಂದಿದ್ದಾರೆಂಬುದು ಈಗ ವ್ಯಕ್ತವಾಗುತ್ತದೆ. ಹಿಂದೆ ಅಲ್ಲಿ ವಿರೋಧಪಕ್ಷದವರೇ ಗೆದ್ದಿದ್ದರು. ಕಾಂಗ್ರೆಸ್ಸಿನವರು ಮುಂದಿನ ಚುನಾವಣೆಯಲ್ಲಿ ಗೆದ್ದು ಬರುವುದಿಲ್ಲವೆಂದು ತಿಳಿದುಕೊಂಡು ಮುಖ್ಯವಾಗಿ ಈ ಮಸೂದೆಯಲ್ಲಿ ಪ್ರಾಪರ್ಟಿ ಟ್ಯಾಕ್ಸನ್ನು ಸೇರಿಸಿದ್ದಾರೆ. ಈಗ ಸೂಪರ್‌ಸೆಷನ್

ಮಾಡಿರುವುದನ್ನು ಕಡಿಮೆಮಾಡಬೇಕೆಂದು ತಾವೇ ಇಲ್ಲಿ ಸೇರಿಸಿರುವುದನ್ನು ನೋಡಿದರೆ, ಕಾರ್ಪೊರೇಷನ್ ಚುನಾವಣೆಯನ್ನು ಗ್ರಾಜುಯಲ್ಲಾಗಿ ಮಾಡಬೇಕೆಂದು ಸೇರಿಸಿದ್ದೀರಿ ಎಂಬ ಅರ್ಥ ಬರುತ್ತದೆ. ಆದ್ದರಿಂದ ಮೊಟ್ಟಮೊದಲನೆಯದಾಗಿ, ಕಾರ್ಪೊರೇಷನ್ನನ್ನು 1970ರವರೆಗೆ ಸೂಪರ್‌ಸೀಡ್ ಮಾಡಿದ್ದೂ ಸರಿಯಾದುದಲ್ಲ, ಇವತ್ತು ಆ ಅವಧಿಯನ್ನು ಕಡಿಮೆಮಾಡಬೇಕೆಂದು ಈ ಮಸೂದೆಯಲ್ಲಿ ತಂದಿರುವುದು ನೋಡಿದರೆ, ಆಳುವ ಪಕ್ಷವೇ ಇದನ್ನು ಒಪ್ಪಿದಹಾಗೆ ಆಯಿತು. ಒಟ್ಟಿನಲ್ಲಿ ಬೆಂಗಳೂರು ಕಾರ್ಪೊರೇಷನ್‌ನ್ನು ಸೂಪರ್‌ಸೆಷನ್ ಮಾಡಿದ್ದೂ ಸರಿಯಾದುದಲ್ಲವೆಂದು ನನ್ನ ವ್ಯಾಖ್ಯಾನ. ಅದನ್ನು ನಾನು ಮಾನ್ಯ ಮಂತ್ರಿಗಳಿಗೆ ಈಗಾಗಲೇ ಹೇಳಿದ್ದೇನೆ. ಆ ಮಾತನ್ನು ಈ ಸಭೆಯಲ್ಲಿಯೂ ಧೈರ್ಯದಿಂದ ಹೇಳುತ್ತಿದ್ದೇನೆ. ಮಾನ್ಯ ಮಂತ್ರಿಗಳು ಈಗ ಹೊಸದಾಗಿ ಬಂದಿದ್ದಾರೆ. ಮಾನ್ಯ ಶ್ರೀ ನಂಜಪ್ಪನವರು ಒಂದು ರೀತಿ ಇಲ್ಲಿ ಹೇಳಿದ್ದಾರೆ. ಮಾನ್ಯ ಶ್ರೀ ಶಾಮಣ್ಣನವರು ಒಂದು ರೀತಿ ಇಲ್ಲಿ ಹೇಳಿದ್ದಾರೆ. ಮೂಲಭೂತವಾಗಿ ಬೆಂಗಳೂರು ಕಾರ್ಪೊರೇಷನ್‌ನ್ನು ಸೂಪರ್‌ಸೆಷನ್ ಮಾಡಬೇಕಾಗಿತ್ತೇ ಎಂಬುದು ಈಗ ಇರತಕ್ಕ ಮುಖ್ಯ ಪ್ರಶ್ನೆ. ಮಾನ್ಯ ಶ್ರೀ ಶಾಮಣ್ಣನವರು ಮತ್ತು ಮಾನ್ಯ ಶ್ರೀ ನಂಜಪ್ಪನವರು ಹಿಂದೆ ಕಾರ್ಪೊರೇಷನ್ನಿನಲ್ಲಿದ್ದರು. ಆದರೆ ಇಲ್ಲಿಗೆ ಅವರು ನೇರವಾಗಿ ಚುನಾಯಿತರಾಗಿ ಬಂದಿರುವವರು. ನಾನು ಅವರ ಬಗ್ಗೆ ವಿರೋಧಕ್ಕೆ ಹೋಗುವುದಿಲ್ಲ. ಮಾನ್ಯ ಶ್ರೀ ಶಾಮಣ್ಣನವರೇ ಆಗಲೀ ಅಥವಾ ಮಾನ್ಯ ಶ್ರೀ ನಂಜಪ್ಪನವರೇ ಆಗಲೀ ಅಥವಾ ಯಾರಾದರೂ ಆಗಿರಲೀ, ಇವರದು ಸರಿಯೇ, ಅವರದು ಸರಿಯೇ ಎಂಬ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಸೂಪರ್‌ಸೀಡ್ ಮಾಡಿದ್ದೇ ತಪ್ಪು ಎಂದು ನನ್ನ ಅಭಿಪ್ರಾಯ. ನನಗೆ ತಿಳಿದಮಟ್ಟಿಗೆ ಸೂಪರ್‌ಸೀಡ್ ಮಾಡುವುದಕ್ಕೆ ಗಾಢವಾದ ಕಾರಣಗಳು ಇರಲಿಲ್ಲ. ಸೂಪರ್‌ಸೀಡ್ ಮಾಡುವುದಕ್ಕೆ ಗಾಢವಾದ ಕಾರಣಗಳು ಇರಬೇಕು. ನಾನು ಹೇಳುವುದಾದರೆ, ಕಾರ್ಪೊರೇಷನ್ನಿನವರು ಯಾವ ತರಿಗೆಯನ್ನು ವಸೂಲುಮಾಡುವುದಿಲ್ಲ ವೆಂಬುದಾಗಲೀ, ತೆರಿಗೆಗಳನ್ನು ಪ್ರತಿಯೊಂದು ತಿಂಗಳೂ ರದ್ದುಮಾಡುತ್ತಿದ್ದಾರೆಂದಾಗಲೀ, ಕಾರ್ಪೊರೇಷನ್ ಅವಯ ಲಂಚಗಳಿತನ ಮತ್ತು ಭ್ರಷ್ಟಾಚಾರ ನಡೆಸುತ್ತಿದ್ದಾರೆಂದಾಗಲೀ, ಕಾರ್ಪೊರೇಷನ್ ಅಧಿಕಾರಿಗಳು ಕೆಳಗಿನ ಅಧಿಕಾರಿಗಳನ್ನು ಹಾಗೂ ನಾಕರನ್ನು ದುರ್ಬಳಿಕೆಯಿಂದ ನೋಡುತ್ತಿದ್ದಾರೆಂದಾಗಲೀ, ಈ ತರಹ ಕಾರಣಗಳು ಇದ್ದಿದ್ದರೆ, ಕಾರ್ಪೊರೇಷನ್ನನ್ನು ಸೂಪರ್‌ಸೀಡ್ ಮಾಡಬಹುದಾಗಿತ್ತು. ಅಂತಹ ಯಾವ ಮೂಲಭೂತ ಕಾರಣಗಳೂ ಇರಲಿಲ್ಲ. ಆದ್ದರಿಂದ ಸೂಪರ್‌ಸೀಡ್ ಮಾಡಿದ್ದೇ ತಪ್ಪು ಎಂದು ಇವತ್ತಿನವರೆಗೂ ನಾನು ಸ್ಪಷ್ಟವಾಗಿ ಹೇಳಬೇಕಾಗಿದೆ. ಬೆಂಗಳೂರು ನಗರದಲ್ಲಿ ಮಾನ್ಯ ಶ್ರೀ ವೈ. ರಾಮಚಂದ್ರ ಅವರು ಬೆಂಗಳೂರು ಜಿಲ್ಲಾ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರು. ಅವರು ಕಾರ್ಪೊರೇಷನ್ ಚುನಾವಣೆಯಾಡಿರುವರೆಗೂ ನಾವು ಒಬ್ಬರೂ ಉಳಿಯುವುದಿಲ್ಲ, ನಿರ್ನಾಮವಾಗುತ್ತೇವೆಂದು ಹೇಳುತ್ತಿದ್ದರು. ತರಿಗೆ ಏಟು ಬಿದ್ದಮೇಲೆ ಈ ಮಸೂದೆಯನ್ನು ಈಗ ತಂದಿದ್ದಾರೆ. ಈ ರೀತಿ ಅವರಿಗೆ ಭಯ ಇದ್ದುದರಿಂದ ಯಾವಾಗ ಚುನಾವಣೆಮಾಡುತ್ತಾರೆಂದು ಹೇಳಲಿಲ್ಲ. ಅದರ ಬಗ್ಗೆ ಮಾನ್ಯಮಂತ್ರಿಗಳು ಒಂದು ಇಂಡಿಕೇಷನ್ ಕೊಡುತ್ತಾರೆಂದು ಇದ್ದೆ. ಏಕೆಂದರೆ ಈ ದಿನ ಬೆಂಗಳೂರಿನ ಜನ ಕಾರ್ಪೊರೇಷನ್‌ನಲ್ಲಿ ತಮ್ಮ ರೆಪ್ರಸೆಂಟೆಟೀವ್ಸ್ ಇಲ್ಲದೆ ತೊಂದರೆಪಡುತ್ತಿದ್ದಾರೆ. ಬೆಂಗಳೂರು ನಗರಕ್ಕೆ ಅಡ್ಮಿನಿಸ್ಟ್ರೇಟರ್ ರೆಜೀಂನಲ್ಲಿ ಬೇಕಾದಷ್ಟು ಕೆಲಸಗಳು ನಡೆದಿವೆ, ಅವರಲ್ಲಿಯೂ ದಕ್ಷ ಅಧಿಕಾರಿಗಳು ಅಲ್ಲಿನ ಅಡಳಿತವನ್ನು ಚೆನ್ನಾಗಿ ನಡೆಸಿಕೊಂಡು ಬಂದಿದ್ದಾರೆ. ನೀವು ಏಕೆ ಗಾಬರಿಮಾಡುತ್ತೀರಿ, ಎಂಬುದಾಗಿ ಇವತ್ತಿನದಿನದ ಕೆಲವು ಮಂತ್ರಿಗಳು ಮಾತನಾಡುತ್ತಿದ್ದಾರೆ. ಆದರೆ ನಿಜಾಂಶ ಏನಿದೆ ಎನ್ನುವ ಬಗ್ಗೆ ಮಂತ್ರಿಗಳು ಹೇಳಿಕೆ ಕೊಟ್ಟಿದ್ದರೆ ಚೆನ್ನಾಗಿತ್ತು. ಕೆಲವು ರಸ್ತೆಗಳನ್ನು ಮಾತ್ರ ಅಗಲಮಾಡಿದ್ದಾರೆ. ದೀಪಗಳನ್ನು ಹಾಕಿಸಿದ್ದಾರೆ. ರೈಲ್ವೆಸ್ಟೇಷನ್ ಮುಂದೆ ಇರತಕ್ಕ ರಸ್ತೆ, ಮಹಾತ್ಮ ಗಾಂಧಿ ರಸ್ತೆ, ಬ್ರಿಗೇಡ್ ರೋಡ್, ಕನ್ನೂರಿಬಾ ರೋಡ್, ಕಾರ್ಪೊರೇಷನ್ ಮುಂದೆ ಇರತಕ್ಕ 2-3 ರೋಡುಗಳನ್ನು ಮಾಡಿದ್ದೇವೆಂದು ಹೇಳಿದ್ದಾರಷ್ಟೆ. ಬೆಂಗಳೂರು ನಗರದಲ್ಲಿ ಕೇವಲ ಇಂಥ 2-3 ರಸ್ತೆಗಳು ಮಾತ್ರ ಇಲ್ಲ. ಬೇಕಾದಷ್ಟು ರಸ್ತೆಗಳಿವೆ. ರಾಜಾಜಿನಗರದಿಂದ ನನ್ನ ಮಾನ್ಯ ಮಿತ್ರರು ಹೇಳಿದಹಾಗೆ, ಸುಮಾರು 2) ಸಾವಿರ ನಾನ್ ಗೆಜೆಟೆಡ್ ನೌಕರರು ಆಫೀಸುಗಳಿಗೆ ಬರುತ್ತಿದ್ದಾರೆ. ಅಲ್ಲಿ ಒಂದು ಕ್ವಾಲ್ ರಸ್ತೆಯೂ ಕೂಡ ಇಷ್ಟು ವರ್ಷಗಳಿಂದಲೂ ಟಾರ್ ಆಗಿಲ್ಲ. ಅಡ್ಮಿನಿಸ್ಟ್ರೇಟರ್ ಬಂದಮೇಲೆ ಅನೇಕ ಕಡೆಗಳಲ್ಲಿ ಲೇಔಟ್ಸ್, ಮೆಟಲಿಂಗ್, ಟಾರಿಂಗ್ ಇನ್ನೂ ಮಾಡಿಲ್ಲ. ತೋರಿಕೆಗೋಸ್ಕರ ಕೇವಲ ಒಂದೆರಡು ರಸ್ತೆಗಳನ್ನು ಮಾತ್ರ ದೊಡ್ಡದು ಮಾಡಿದ್ದಾರೆ. ಆದೇ ಕಾರ್ಪೊರೇಟರ್ಸ್ ಇದ್ದಿದ್ದರೆ ಇದುವರೆಗೆ ಇನ್ನೂ ಹೆಚ್ಚು ಕೆಲಸಮಾಡುವುದಕ್ಕೆ ಸಾಧ್ಯವಾಗುತ್ತಿತ್ತು. ರಸ್ತೆಗಳ ಕೆಲವು ಕಾರ್ಪೊರೇಷನ್ ಕೌನ್ಸಿಲರ್ಸ್ ಇದ್ದಾಗ್ಲೆ ಬಹಳ ಹೆಚ್ಚಾಗಿ ನಡೆಯುತ್ತಿತ್ತು. ಅಂಥಾದ್ದನ್ನು. ಇವರು ಮಾಡುವ ಪರಿಸ್ಥಿತಿಯಲ್ಲಿಲ್ಲ. ಇನ್ನು ತೆರಿಗೆಗಳನ್ನು ಬಹಳವಾಗಿ ವಸೂಲುಮಾಡಿದ್ದಾರೆಂದು ಕಾರ್ಪೊರೇಷನ್ ಅಡ್ಮಿನಿಸ್ಟ್ರೇಷನ್ ವರದಿ

(ಶ್ರೀ ಎಂ. ಎಸ್. ಕೃಷ್ಣನ್)

ಯಲ್ಲವೆ. ಮೊದಲಿಗಿಂತ ಈಗ ಬಹಳ ವಸೂಲು ಮಾಡಿಸ್ತೇವೆಂದು ಜಂಬಕೊಚ್ಚಿಕೊಳ್ಳುತ್ತಿದ್ದಾರೆ. ಮೊದಲು ಎಷ್ಟು ವಸೂಲು ಮಾಡುತ್ತಿದ್ದರೋ ಅದಕ್ಕಿಂತ ಸ್ವಲ್ಪ ಉತ್ತಮವಿರಬಹುದು. ಆದರೆ ಜನರ ಪ್ರತಿನಿಧಿಗಳ ಸಹಕಾರ ಪಡೆದರೆ ಇನ್ನೂ ಹೆಚ್ಚು ವಸೂಲು ಮಾಡಬಹುದೆಂಬುದು ಈಗಿನ ಪ್ರಶ್ನೆ. ಅದನ್ನು ಈಗ ಮಾಡುವಿದ್ದರೆ, ಕಾರ್ಪೊರೇಷನ್ನಿನಲ್ಲಿ ತೆರಿಗೆ ವಸೂಲು ಜಾಸ್ತಿಯಾಗುವುದಿಲ್ಲ. ಜನಗಳ ಮನಸ್ಸಿನಲ್ಲಿ ತೆರಿಗೆಗಳನ್ನು ಕೊಡಬಾರದೆಂಬ ಭಾವನೆ ನಡೆದಿರುವುದೇ ತೆರಿಗೆ ಉತ್ಪತ್ತಿ ಕಡಿಮೆಯಾಗಿರುವುದಕ್ಕೆ ಕಾರಣವೆಂದು ಹೇಳಬಹುದು. ಸೂಪರ್ ಸೀಡ್ ಮಾಡಿದ್ದು ನಿಜ, ದಕ್ಷರಾದ ಅಡ್ಮಿನಿಸ್ಟ್ರೇಟರ್ ಆಡಳಿತ ಮುಂದುವರಿಯಲ್ಲಿ ಎಂಬುದಾಗಿ ಯಾರು ಹೇಳಿದರೋ ಅಂತಹವರಿಗೆ ಬುದ್ಧಿ ವಿಕಲ್ಪವಾಗಿದೆ. ಭಾರತದೇಶದಲ್ಲಿ ಹಿಂದೆ ಒಂದು ವಾದವಿತ್ತು. ಆಗ ರೀಜೆಂಟ್ ರೆಜೀಂನಲ್ಲಿ ಒಬ್ಬ ಅಧಿಕಾರಿಯೇ ಇದ್ದರು. ಎಲ್ಲಾ ಕೆಲಸಕಾರ್ಯಗಳನ್ನು ಒಬ್ಬರೇ ನೋಡುತ್ತಿದ್ದರು. ಆಗಲೇ ಭಾರತೀಯರಿಗೆ ಪ್ರಜಾಪ್ರಭುತ್ವ ಕೊಡಬಾರದೆಂಬ ಅಭಿಪ್ರಾಯವಿತ್ತು. ಈಗ ಪ್ರಜಾಪ್ರಭುತ್ವ ಇರುವ ಕಾಲದಲ್ಲಿ ಕಾರ್ಪೊರೇಷನ್ನಿನಲ್ಲಿ ಅಡ್ಮಿನಿಸ್ಟ್ರೇಟರ ಆಡಳಿತ ಸರಿಯೆಂದು ಹೇಳುವುದು ನಾಚಿಕೆಗೇಡು ಎಂಬುದಾಗಿ ಹೇಳುತ್ತೇನೆ. ದಕ್ಷವಾದ ಆಡಳಿತಗಾರರು ಇದ್ದರೂ ಸಹ ಪ್ರಜಾಪ್ರಭುತ್ವ ಯುಗದೊಳಗೆ ಅವರನ್ನು ಮುಂದುವರಿಸುವುದು ಸರಿಯಲ್ಲ. ಒಬ್ಬ ಚೀಫ್ ಸೆಕ್ರೆಟರಿ ಇದ್ದರೆ ಸಾಕು, ಎಲ್ಲಾ ನಡೆಸಿಕೊಂಡು ಹೋಗುತ್ತಾರೆ. ಇನ್ನೊಂದು ಇವರು 47 (ಎ) (ಎ)ಯನ್ನು ತೆಗೆದುಕೊಂಡಿರುವುದು ಸ್ವಾಗತಾರ್ಹ. ಇನ್ನೊಂದು ಏನೆಂದರೆ, ಎಲೆಕ್ಟೊರಲ್ ರೋಲ್ಸ್‌ನ ವಿಚಾರ ಹೇಳಿದ್ದಾರೆ. ಇದರಲ್ಲಿ ಬರೆದಿರುವುದು ಏನೆಂದರೆ :

> "Electoral rolls shall be prepared in accordance with the rules in Schedule VIII."

3-30-P.M.

ಏನೆಂದರೆ ಶೆಡ್ಯೂಲ್ 8 ಈಗ ಬಿಲ್ಲಿನ ಭಾಗವಾಗುತ್ತದೆ, ನಾಳೆ ಆಕ್ಟಿನ ಭಾಗವಾಗುತ್ತದೆ. ಇದು ಸರಿಯಾಗಿದೆಯೇ ? ಅವರು ಕಾರಣ ಕೊಟ್ಟಿದ್ದಾರೆ "ಶೆಡ್ಯೂಲ್ 7 ಆದಮೇಲೆ 8 ಬರುತ್ತದೆ" ಎಂದು. ಅದು ಹೇಗೆ ಎಂಬುದನ್ನು ವಿಮರ್ಶೆ ಮಾಡೋಣ. ಶೆಡ್ಯೂಲ್ 7 ಪೆನಾಲ್ಟೀಸ್ ಬಗ್ಗೆ ಇರುವುದು. Schedule VII deals with penalties and fine, and failure to maintain house connection, etc., etc., ಅದರಲ್ಲಿ ಯಾವ ರೀತಿ ಪೆನಲ್ಟೀಸ್ ಹಾಕಬೇಕೆಂಬ ಅಧಿಕಾರವನ್ನು ಕೊಟ್ಟಿದ್ದಾರೆ. ಶೆಡ್ಯೂಲ್ 8 ಎಲೆಕ್ಟೊರಲ್ ರೋಲ್ಸ್‌ನ್ನು ಆಕ್ಟಿನ ಭಾಗ ಮಾಡಿದರೆ, ನಾಳೆ ಜನತೆಯ ಹಿತದೃಷ್ಟಿಯಿಂದ ಸ್ವಲ್ಪಮಟ್ಟಿಗೆ ಬದಲಾವಣೆ ಮಾಡಬೇಕಾದರೂ ಸಹ, ಅವರು ನೇರವಾಗಿ, ಅಸೆಂಬ್ಲಿಗೆ ಬರಬೇಕು. ತಾವಾಗಿ ಮಾಡುವುದಕ್ಕೆ ಅವರಿಗೆ ಅಧಿಕಾರ ಇರುವುದಿಲ್ಲ. ಆ ದೃಷ್ಟಿಯಿಂದ ಶೆಡ್ಯೂಲ್ 8 ಪ್ರತ್ಯೇಕವಾಗಿ ಇದ್ದರೆ ಒಳ್ಳೆಯದು. ನನ್ನ ಅಮೆಂಡ್‌ಮೆಂಟ್‌ನಲ್ಲಿ ಅದನ್ನು ತಂದಿದ್ದೇನೆ :

> "Provided that the Government may add to the schedule any rules as are deemed necessary in connection with the elections."

ಯಾರೂ ರೂಲ್ ಮಾಡುವ ಅಧಿಕಾರವನ್ನು ಇಟ್ಟುಕೊಳ್ಳಬಹುದು. ಸ್ವಲ್ಪ ಮಟ್ಟಿಗೆ ಫ್ಲೆಕ್ಸಿಬಲ್ ಆಗಿರಲಿ ಎಂದು ಅದನ್ನು ಸೇರಿಸಿದ್ದೇನೆ. ಇಲೆಕ್ಷನ್ ನಡೆಯಕೂಡದು ಎಂದು ಸೇರಿಸಿಲ್ಲ.

ಮೂರನೆಯ ವಿಷಯ. ಅಮೆಂಡ್‌ಮೆಂಟ್ ಟು ಸೆಕ್ಷನ್ 61, ಇದರ ಬಗ್ಗೆ ಏನೂ ಹೇಳುವುದಕ್ಕಾಗುವುದಿಲ್ಲ. ಶಾಮಣ್ಣನವರು ಹೇಳಿದಂತಹ ಅಮೆಂಡ್‌ಮೆಂಟನ್ನು ಒಪ್ಪಿಕೊಳ್ಳುತ್ತೇನೆ. ಎಜುಕೇಶನಲ್ ಸಂಸ್ಥೆಗಳಿಗೆ ವಿನಾಯಿತಿ ಇರಬೇಕು, ಅದು ಕೂಡ ನ್ಯಾಯವಾದುದು. ಅದರ ಜೊತೆಗೆ ಸಾಂಸ್ಕೃತಿಕ ಚಟುವಟಿಕೆಗಳಿಗೆ ಮತ್ತು ನಗರದ ಜನತೆಯ ಹಿತದೃಷ್ಟಿಯಿಂದ ಉತ್ತೇಜನ ಕೊಡುವುದು, ಶಾಮಣ್ಣನವರು ಹೇಳಿದಂತೆ ನ್ಯಾಯವಾದದು. ಅದಕ್ಕಿಂತ ಮುಖ್ಯವಾದುದು ಕ್ಲಾಸ್ 10. ಇದರ ಬಗ್ಗೆ ಮಾನ್ಯ ಮಂತ್ರಿಯವರು ಹೇಳಿದ್ದನ್ನು ಕೇಳಿದ್ದೇನೆ. ನಾವು ಹೇಳಿದ್ದೇ ರೈಟ್, ಜನರ ಹಿತದೃಷ್ಟಿಯಿಂದ ತಂದಿದ್ದೇವೆ, ಆದ್ದರಿಂದ ನೀವು ಹೇಳುವುದು ಒಪ್ಪಿಕೊಳ್ಳುವುದಿಲ್ಲವೆಂದು ಹೇಳುವುದು ಸರಿಯಲ್ಲ. ಏಕೆಂದರೆ, ಅದರೊಳಗೆ, ಮುಖ್ಯವಾದ ಪ್ರಶ್ನೆ ಬರುತ್ತದೆ.

104ರೊಳಗೆ, ಸರ್ಕಾರಿ ಕಟ್ಟಡಗಳಲ್ಲಿ ಯಾರಾದರೂ ರೆಂಟಿಗೆ ಇದ್ದರೆ, ತೆರಿಗೆಗಳನ್ನು ವಸೂಲು ಮಾಡುವುದು ಹೇಳಿದ್ದಾರೆ :

> " Provided that the property tax due in respect of buildings vesting in the Government and occupied by servants of the Governments or other persons on payment of rent shall be leviable primarily from the Government and if the premises are not so held from the lessor if the premises are let, from the superior lessor if the premises are sub-let and from the person in whom the right to let the premises vests; if they are unlet. "

ಇದರಿಂದ ಏನಾಗಿದೆ ಎಂದರೆ, ಯಾರು ಒಬ್ಬ ನೌಕರ ಸರ್ಕಾರಿ ಭವನದಲ್ಲಿ ಇದ್ದರೆ, ಅಂಥವನಿಂದ ಕೂಡ ವಸೂಲು ಮಾಡಬಹುದು. ಈ 104 (ಎ) ಇದು ಬಹಳ ಅನ್ಯಾಯವಾಗುತ್ತದೆ. ಇದರೊಳಗೆ ಯಾರಿಗೋ ಒಬ್ಬನಿಗೆ ತೆರಿಗೆ ಜಾಸ್ತಿ ಮಾಡಿಬಿಟ್ಟಿದ್ದಾರೆ, ಆದರೆ ಅವರಿಂದ ವಸೂಲು ಮಾಡುತ್ತಿರುವ ಬಾಡಿಗೆ ಕಡಿಮೆ. ಎಷ್ಟು ಬಾಡಿಗೆ ಇದೆಯೋ, ಅಷ್ಟಕ್ಕೆ ತೆರಿಗೆ ಫಿಕ್ಸ್ ಮಾಡಿ ವಸೂಲು ಮಾಡುವುದಕ್ಕೆ ಪ್ರೊವಿಜನ್ ಮಾಡಬೇಕೆಂದು ಹೇಳಿದ್ದಾರೆ. ಇದು ನಿಜವಾಗಿ ತೊರಿಕೆಗೆ ತರುತ್ತಿದ್ದಾರೆ. ಜಾಸ್ತಿ ಟ್ಯಾಕ್ಸ್ ಹಾಕಿದರೂ ಚೆನೆಂಟಿನಿಂದ ವಸೂಲು ಮಾಡಬಹುದು.

Mr. SPEAKER.—It is in the nature of rent. The landlord it appears, can recover more if there is increase in tax on property. That principle is accepted under the Rent Control Act. There is nothing new about it. Probably it is an accepted principle every where.

ಶ್ರೀ ಎಂ. ಎಸ್. ಕೃಷ್ಣನ್.—ತಾವು ಹೇಳಿದ್ದನ್ನು ಒಪ್ಪಿಕೊಳ್ಳುತ್ತೇನೆ. ಆದರೆ ಅವಾಂತರ, ಗೊಂದಲ, ಅಪಾಯ ಹೇಗೆ ಉಂಟಾಗುತ್ತದೆ ಎನ್ನುವುದನ್ನು ಹೇಳುತ್ತೇನೆ. ಅದರ ಬಗ್ಗೆ ಪ್ರೊಟೆಕ್ಷನ್ ಇದ್ದರೆ ಒಪ್ಪಿಕೊಳ್ಳಬಹುದಿತ್ತು. ಮೊದಲನೆಯದು ಚೆನೆಂಟಿನಿಂದ ವಸೂಲು ಮಾಡುವ ಅಧಿಕಾರ ಮನೆಯ ಮಾಲೀಕನಿಗೆ ಕೊಡುತ್ತಾರೆ. ಇದು ಕಾರ್ಪೊರೇಷನ್ ಅಧಿಕಾರ. ಈ ಅಧಿಕಾರವನ್ನು ಮನೆಯ ಮಾಲೀಕನಿಗೆ ಏತಕೆ ಕೊಡಬೇಕು ? ಹಾಗೆ ಕೊಡುವುದು ನ್ಯಾಯವಾದುದಲ್ಲ. ಅದಕ್ಕಿಂತ ಮುಖ್ಯವಾದುದು ಏನೆಂದರೆ, ಮನೆಯ ಮಾಲೀಕನಿಗೂ ಬಾಡಿಗೆ ಜಾಸ್ತಿ ಮಾಡುವುದಕ್ಕೆ ಅವಕಾಶ ವಾಗುತ್ತದೆ. ಮೊದಲೇ ನಗರದಲ್ಲಿ ಬಾಡಿಗೆ ಜಾಸ್ತಿಯಾಗಿ ಜನರು ಬಹಳ ಕಷ್ಟ ಪಡುತ್ತಿದ್ದಾರೆ. ಕಾನೂನು ದೃಷ್ಟಿಯಿಂದ ಚೆನೆಂಟ್ಸ್ ಹೆಚ್ಚು ಟ್ಯಾಕ್ಸ್ ಕೊಡುತ್ತಾರೆ. ಒಬ್ಬ ಲೀಸ್‌ಗೆ ತೆಗೆದುಕೊಂಡು ಮನೆಯನ್ನು ಕಟ್ಟಿಕೊಂಡಿರುತ್ತಾನೆ, ಅವನಿಗೆ ಇನ್ನೂ ಹೆಚ್ಚು ಮಾಡುವುದಕ್ಕೆ ಅಧಿಕಾರ ಬರುವುದಿಲ್ಲವೇ ?

ಆದ್ದರಿಂದ ಈ ತರಹ ಒಂದು ಹೆಚ್ಚಿನ ಎಡರು ತೊಡರುಗಳು, ತೊಂದರೆಗಳು ಆಗುವುದಕ್ಕೆ ಇದರಲ್ಲಿ ಅವಕಾಶ ಇದೆಯೆಂದು ಕಾಣುತ್ತದೆ. ಈ ದೃಷ್ಟಿಯಿಂದ ನಾನು ಮಾನ್ಯ ಮಂತ್ರಿಗಳನ್ನು ಕೇಳುವುದು ಏನೆಂದರೆ ಈ ಒಂದು ಕ್ಲಾಜನ್ನು ತೆಗೆದುಹಾಕಬೇಕು ಎಂದು ನಾನು ಹೇಳುತ್ತೇನೆ.

ಇನ್ನೊಂದು ಸೂಚನೆ ಕಾರ್ಪೊರೇಷನ್ ಚುನಾವಣೆಗೆ ಸಂಬಂಧಪಟ್ಟ ಹಾಗೆ ಶ್ರೀಮಾನ್ ಶಾಮಣ್ಣನವರು ಒಂದು ಸೂಚನೆಯನ್ನು ಮಾಡಿದರು. ಅದು ಏನೆಂದರೆ ಈ ಕಾರ್ಪೊರೇಷನ್ ಚುನಾವಣೆಯನ್ನು ಮಾಡುವುದಾದರೆ ಮೊದಲು ಮತದಾರರ ಪಟ್ಟಿಯನ್ನು ತಯಾರುಮಾಡಬೇಕು ಮತ್ತು ಆ ರೀತಿ ಮತದಾರರ ಪಟ್ಟಿಯನ್ನು ತಯಾರು ಮಾಡುವಾಗ ಎಲ್ಲಾ ಡಿವಿಜನ್‌ಗೂ ಒಂದೇ ಸಂಖ್ಯೆಯ ಮತದಾರರನ್ನು ಹೊಂದಿರಬೇಕು. ಡಿವಿಜನ್ ವರ್ಗೀಕರಣ ಸರಿಯಾಗಿರಬೇಕು. ಈ ಮತದಾರ ಪಟ್ಟಿಯನ್ನು ತಯಾರು ಮಾಡುವ ಹಾಗೂ ಎಲ್ಲಾ ಡಿವಿಜನ್ನಿಗೂ ಒಂದೇ ಸಂಖ್ಯೆಯ ಮತದಾರರನ್ನು ಹೊಂದುವಂತೆ ಅವನ್ನು ವರ್ಗೀಕರಣ ಮಾಡುವ ಸಂಬಂಧದಲ್ಲಿ ಸಂಬಂಧಪಟ್ಟವರೆಲ್ಲರನ್ನು ಕರೆದು ಯಾರಿಗೂ ರಾಜಕೀಯ ಭಿನ್ನಾಭಿಪ್ರಾಯ ಬಾರದ ಹಾಗೆ ಮಾತನಾಡಬೇಕು. ಅದಷ್ಟು ಬೇಗ ಬೆಂಗಳೂರು ಕಾರ್ಪೊರೇಷನ್ ಚುನಾವಣೆಯನ್ನು ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಹೇಳಿ ಮಾನ್ಯ ಅಧ್ಯಕ್ಷರಿಗೆ ನನ್ನ ವಂದನೆಗಳನ್ನು ಅರ್ಪಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† Sri M. A. AMALORPAVAM (Bharathinagar).—Mr. Speaker Sir, kindly permit me to welcome the amending Bill to the Corporation Act. I was under the impression that the hon. Members of the Opposition would be really jubilant to welcome this amending Bill which in my humble opinion is long overdue. But the members of the Opposition, not all but some of them, have criticised it. This has become the tendency of some of the Opposition members.

(*Interruptions*)

We have been always listening whenever they talk without interrupting whatsover. But unfortunately when I get up, some of the members on the other side do not sit quiet. Whenever we get up they think that everything we say is wrong. This kind of approach will take us nowhere. With all humility I say this kind of approach is not at all proper. They should reciprocate the approach that we make. The moment we get up, there will be interruption. This is not a healthy approach. We listen to them quietly whatever they say. Let them criticise us, but let them not interrupt us while speaking. Some of the members of the Opposition think that we are all bad. We too have got some sense of responsibility. We too are interested in the welfare of the people of Bangalore City. They think that they are the only custodians of the people of Bangalore. This is too bad. This kind of attitude should not be adopted by anybody. We are not here just to be dictated.

Sri M. S. KRISHNAN.—If the hon Member yields, I want to say something.

Mr. SPEAKER.—There should be no unnecessary interruptions. These things should be avoided. No explanation is needed.

Sri M. A. AMALORPAVAM.—It is open to the Opposition to point out mistakes if I commit. If they keep on interrupting, the chain of thought will get disturbed.

Sir, the Government of Hon. Veerendra Patil deserves wholehearted congratulations because this amending Bill is a Bill which ought to be welcomed by everyone not only in Bangalore, but throughout the State of Mysore. I am not here to talk on the postponement of the election. I am interested in pointing out a few salient features of this amending Bill.

Sir, we are all firm believers in democracy. We do know that even the best of Government is not a substitute to self-Government. All these days unfortunately, owing to the exigencies of circumstances, the Government was constrained to carry on the administration in the manner it has carried on until the elected body takes up office. We were not happy when the Corporation was superseded. Sir, in compliance with our request and in compliance with the request of the members of Opposition, the Government has been good enough to come forward with this amendment Bill and sooner these

elections are held the better it would be. We really congratulate the Government for bringing in this amendent Bill whereby the Government is exempting from payment of tax, educational institutions which were formerly made to pay more taxes. With the present amendment proposed by the Government, many of the institutions would be relieved of this tax burden and would also help the institutions to develop by diverting that particular amount for other fruitful expenditure. In welcoming this particular amendment along with the other amendments I would really congratulate the Government for having thought of bringing this piece of legislation before this House.

Sir, it is said that some of the members on this side did not conduct themselves properly in the Corporation. It is a fact that some members belonging to the Ruling Party did not conduct themselves well. We are determined to condemn such a thing which happened in the Municipal Corporation. But the members of other parties in criticising the Congress Members should be reasonable and charitable to condemn the mistakes on their side also. It is not only some Congress Members conducted themselves in an unbecoming way but at least some members from all parties also did not conduct themselves in a dignified manner with the result the entire population of Bangalore City was put to inconvenience. Sir, even in this House, as representatives of the public we are given every opportunity to express ourselves freely without any limitation, without any hindrance to say what all we feel, in a dignified and decent way. But unfortunately, I do not know for what reason certain things developed in such a manner as to force the Government to take action and supersede the Corporation of Bangalore. I know Sir, it was not at all an action to be welcomed by any one. I think even the Government, the Hon. Chief Minister and also the Minister for Municipal Administration would have taken the decision to supersede the Corporation with great pain because they are all confirmed believers in democracy. We may call them as autocrats or dictators as was expressed by some Hon. Members and an Hon. Member stated that the supersession of the Corporation was merely due to politics and the Opposition was not responsible for that. But Sir, I would say that even for this present Bill to be brought before this House, they have not brought it because they were forced to do it. But they have brought this Bill since they felt that a time has come when the people would have realised their difficulties and mistakes and therefore they have brought this Bill.

I do not want to say more on this Bill, as I belong to the party which has brought this Bill. It is almost superfluous on my part to say anything more. But since, I heard some Hon. Members saying that this Bill was brought with a political motive. A remark was made that some Congress Members did not conduct themselves in a dignified way in the Corporation. I feel Sir, that this is not a charitable way to criticise others. Sir, whenever we are in the wrong, we have the courage to come out boldly not only on the floor of this House, but even on the

(SRI M. A. AMALORPAVAM)

platform outside, to say that we are in the wrong. But, unfortunately, I find the members of the Opposition think that they never commit an error and it is only the Congressmen who are born to err and continue to err. That kind of attitude is undemocratic in a country where we had men of moral characters, men who struggled for attaining independence for the country and men who are all bound to bow to discipline. We had great leaders line Jawaharlal Nehru, who belonged to Congress Party. It is rather very uncharitable for the Opposition to think in that way. We are all bound by certain principles and discipline. When our Leader says 'sit' we 'sit' and when the Leader asks us to 'stand' we 'stand'. We have always respected whenever the Hon. Leader of the Opposition stands to speak—Hon. Sri Siddaveerappa and Hon. Sri Channabasappa and other senior members of the Opposition rise to speak. We respect them because they respect the conventions, they respect the Hon. Chair. Therefore Sir, when a Bill for the welfare of the people and for the holding of elections to the superseded Corporation is brought before this House, instead of welcoming such a measure or making valuable suggestions, the members of the Opposition are again conducting a postmortem criticising the Government saying that the supersession was due to Congressmen and all that. Why should they talk about things which the people already know ? Why should they merely try to criticise the Hon. Members on this side ? I very humbly submit to you Sir, that we on this side are not at all protected. I know also Sir, that you have tried your best to protect us, unfortunately we are not allowed to take much time as is necessary or as is given to the other side. Whenever we rise to speak, there will be so many interruptions, so many unbecoming allegations and therefore we beg of you Sir, kindly to protect our interest and whenever we rise to speak we should also be allowed to express ourselves freely and it should be heard without any interruptions. If we commit any mistake, let them tear us into pieces, instead of interrupting and making us lose the chain of our thoughts while speaking.

I once again say that we have run the Corporation for so many years and only once the Opposition was in power and we know what happened at that time. Sir, men like Mr. Kamaraj and Mr. Subramaniam proved that the Congress Government very firmly believes in democratic conventions and democratic principles. We are never afraid of the Opposition; let the Corporation of Bangalore City be in the hands of the Opposition; once again the public is there to choose the representatives. Even if the Opposition comes to power we will certainly co-operate with them and let them not blame always the Congress Party; let them succeed in the elections by a majority we will give our wholehearted support.

Sir, I once again congratulate the Hon. Chief Minister Mr. Veerendra Patil, the Hon. Minister of State for Municipal Administration Mr. B. M. Patil and the Government as a whole for

bringing this Bill and I hope the voters would be distributed in a sensible manner, so as to see that each division gets equal number of voters for the elections to the City of Bangalore Municipal Corporation. I am sure, the Government will do the needful in the matter.

I thank you, Mr. Speaker, for having been so kind enough in allowing me to speak on this Bill.

4-00 P.M.

†ಶ್ರೀ ವಾಟಾಳ್ ನಾಗರಾಜ್.—ಸ್ವಾಮಿ ಅಧ್ಯಕ್ಷರೇ, ಈ ಬಿಲ್ಲಿನ ಬಗ್ಗೆ ಮಾನ್ಯ ಶಾಮಣ್ಣನವರು ಇಲ್ಲಿ ತಂದಿರತಕ್ಕ ತಿದ್ದುಪಡಿಗಳನ್ನು ನಾನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ.

ಶ್ರೀಮಾನ್ ನಂಜಪ್ಪನವರು ಹಾಗೂ ಶ್ರೀ ಅಮರೋರಪವಂ ಅವರು ಕೆಲವು ಮಾತುಗಳನ್ನು ಈ ಸಂದರ್ಭದಲ್ಲಿ ಹೇಳಿದರು. ಅವರು ಶಿಸ್ತು, ಪ್ರಜಾಪ್ರಭುತ್ವ, ಕಾಂಗ್ರೆಸ್ಸು ಹಾಗೂ ಮಹಾತ್ಮ ಗಾಂಧಿಯವರ ಬಗ್ಗೆ ಹೇಳಿದರು. ಮಹಾತ್ಮ ಗಾಂಧಿಯವರು ಹೆಂಡವನ್ನು ಮಾರಬೇಡಿ ಎಂದರು, ನೀವು ಹೆಂಡವನ್ನು ಮಾರುತ್ತಿದ್ದೀರಿ. ಪಾನ ನಿರೋಧವನ್ನು ಜಾರಿಗೆ ತರಬೇಕು ಎಂದು ಗಾಂಧಿಯವರು ಹೇಳುತ್ತಿದ್ದರು ಆದರೆ ಇನ್ನೂ ಅದನ್ನು ಮುಂದುವರಿಸುತ್ತಿದ್ದೀರಿ. ಗಾಂಧಿ ಮಹಾತ್ಮರು ಈ ದೇಶದಲ್ಲಿ ಯಾವ ರೀತಿ ಆಡಳಿತ ಇರಬೇಕು ಮತ್ತು ಅವನ್ನು ಹೇಗೆ ನಡೆಸಬೇಕು ಎಂದು ಹೇಳಿದ್ದರೋ ಅದಕ್ಕೆ ತದ್ವಿರುದ್ಧವಾಗಿ ಯಾವ ತರಹ ಆಡಳಿತ ನಡೆಸುತ್ತಿದ್ದೀರಿ ಎನ್ನುವುದು ಎಲ್ಲರಿಗೂ ಗೊತ್ತಿದೆ. 1948ರಲ್ಲಿ ಏನಾದರೂ ಮಹಾತ್ಮ ಗಾಂಧಿಯವರು ಸಾಯದೇ ಇದ್ದಿದ್ದರೆ ಅವರು ಇಂದು ಬದುಕಿದ್ದರೆ ಇವರು ಮಾಡುವ ಆಡಳಿತದ ವೈಖರಿಗಳನ್ನು ನೋಡಿ ನಿಮ್ಮ ಈ ವಿಧಾನ ಸೌಧದ ಮುಂದೆ ಸತ್ಯಾಗ್ರಹ ಮಾಡುತ್ತಿದ್ದರು. ನೀವುಗಳು ಮಾಡುತ್ತಿರುವ ಈ ದುರಂತಗಳನ್ನು ಮತ್ತು ನಿಮ್ಮ ಆಡಳಿತದಲ್ಲಿರುವ ಸ್ವಜನ ಪಕ್ಷಪಾತ ಇವನ್ನು ನೋಡಿದ್ದರೆ ಅವರು ಖಂಡಿತ ದುಃಖ ಪಡುತ್ತಿದ್ದರು. ಇಂತಹ ಕಾಂಗ್ರೆಸ್ಸು ಪಕ್ಷದವರು ಇಂದು ವಿರೋಧ ಪಕ್ಷದವರಿಗೆ ಶಿಸ್ತು, ನಿಯಮ ಹಾಗೂ ನಡತೆ ಇವುಗಳ ಬಗ್ಗೆ ಬುದ್ಧಿ ಹೇಳುತ್ತಿದ್ದಾರೆ. ಬೆಂಗಳೂರು ಕಾರ್ಪೊರೇಷನ್‌ನ್ನು ರದ್ದು ಮಾಡಬೇಕೆಂದು ಮಾಡಿದವರು ವಿರೋಧ ಪಕ್ಷದವರಲ್ಲದಿದ್ದರೂ ಅವರೇ ಮಾಡಿದರು ಎಂದು ಇಲ್ಲಿ ಮಾನ್ಯ ಸದಸ್ಯರಾದ ಶ್ರೀ ನಂಜಪ್ಪನವರು ಹಾಗೂ ಶ್ರೀ ಅಮರೋರಪವಂರವರು ಹೇಳಿದ್ದಾರೆ.

ಈ ಹಿಂದೆ ಈ ರಾಜ್ಯದ ಉಪಮಂತ್ರಿಗಳಾಗಿದ್ದವರು ಒಬ್ಬರು ಬೆಂಗಳೂರು ನಗರ ಸಭೆಯ ಸದಸ್ಯರಾಗಿದ್ದರು. ಇವರ ಕಣ್ಣು ಎಲ್ಲಿಯವರೆಗೆ ಹೋಗಿತ್ತು ಎನ್ನುವುದಕ್ಕಾಗಿ ಇಲ್ಲಿ ಹೇಳುತ್ತಿದ್ದೇನೆ. ಬೆಂಗಳೂರಿನಲ್ಲಿ ಒಂದು ಸ್ಮಶಾನ ಇತ್ತು. ಆ ಜಾಗಕ್ಕೆ ಸುಮಾರು ಏಳು ಲಕ್ಷದಷ್ಟು ಹಣವನ್ನು ಯಾರಾದರೂ ಕೊಟ್ಟು ಕೊಂಡುಕೊಳ್ಳುತ್ತಿದ್ದರು. ಆ ಜಾಗವನ್ನು ಹೇಗಾದರೂ ಮಾಡಿ ಪಡೆಯಬೇಕೆಂದು ಪ್ರಯತ್ನ ಮಾಡಿದರು ಇವರ ಜೊತೆಗೆ ಇನ್ನೂ ಕೆಲವು ಕಾಂಗ್ರೆಸ್ಸಿಗರನ್ನು ಸೇರಿಸಿಕೊಂಡು ಒಂದು ಸಿಂಡಿಕೇಟು ಮಾಡಿಕೊಂಡರು. ಇದರಲ್ಲಿ ಅವರೇ ಚೇರ್ಮನ್ನರಾದರು ಮತ್ತು ಅವರು ನಾಲ್ಕು ಜನ ಸದಸ್ಯರು ಎಂದಾದರು. ಇವರೆಲ್ಲರೂ ಸೇರಿಕೊಂಡು ಸ್ಮಶಾನದ ಜಾಗವನ್ನು ಪಡೆಯಬೇಕು ಎಂದೂ ಅದನ್ನು ಒಬ್ಬರು ಬಾಂಬೆ ಕಡೆಯಿಂದ ಬಂದವರಿಗೆ ಸಿನಿಮಾ ಥಿಯೆಟರು ಕಟ್ಟಲು ಲೀಸ್ ಮೇಲೆ ಅವರಿಗೆ ಕೊಡಬೇಕೆಂದು ಸನ್ನಾಹ ಮಾಡಿದ್ದರು. ಆದರೆ ಬೆಂಗಳೂರಿನಲ್ಲಿರುವ 17 ಲಕ್ಷ ಜನತೆಗೆ ಬೇಕಾಗಿರುವ ಈ ಸ್ಮಶಾನವನ್ನು ಪಡೆಯಲು ಇವರು ನಾಲ್ಕು ಜನ ಪ್ರಯತ್ನ ಪಟ್ಟಾಗ ಬೆಂಗಳೂರು ಕಾರ್ಪೊರೇಷನ್ ಸಭೆಯಲ್ಲಿ ವಿರೋಧ ಪಕ್ಷದವರು ಇದರ ಬಗ್ಗೆ ಪ್ರತಿಭಟಿಸಿದಾಗ ಇವರೇನು ಮಾಡಿದರು ಎನ್ನುವುದು ಎಲ್ಲರಿಗೂ ಗೊತ್ತು. ಇವರೆಲ್ಲರೂ ಗಾಂಧಿ ಭಕ್ತರು ಹಾಗೂ ಗಾಂಧಿಯವರ ಅನುಯಾಯಿಗಳು ಮತ್ತು ಕಾಂಗ್ರೆಸ್ಸು ಸಂಸ್ಥೆಗೆ ಕಾಂಗ್ರೆಸ್ಸು ಮಾಡುವವರು, ಏಳು ಲಕ್ಷ ರೂಪಾಯಿ ಬೆಲೆ ಬಾಳುವ ಸಾರ್ವಜನಿಕರ ಆಸ್ತಿಗೆ ಧಕ್ಕೆ ತರುವ ರೀತಿಯಲ್ಲಿ ವರ್ತಿಸುತ್ತಿದ್ದರು ಎಂದು ಪೌರಸಮಿತಿಯ ವಿರೋಧ ಪಕ್ಷದ ಸದಸ್ಯರು ಒಬ್ಬರು ಇದರ ಪ್ರಸ್ತಾಪ ಮಾಡಿದಾಗ ಓಪನ್ ಆಗಿ ಮೀಟಿಂಗಿನಲ್ಲಿ ಒಬ್ಬರು ಸದಸ್ಯರು ವಿರೋಧ ಪಕ್ಷದ ಸದಸ್ಯರ ಕಪಾಲಕ್ಕೆ ಹೊಡೆದರು. ಇದರ ಕೇಸು ಇನ್ನೂ ಕೋರ್ಟು ಮುಂದೆ ನಡೆಯುತ್ತಿರಬಹುದು. ಕಾಂಗ್ರೆಸ್ಸಿನವರು ಅಹಿಂಸಾವಾದಿಗಳೆಂದು ಹೆಸರು ಪಡೆದವರು ಓಪನ್ ಮೀಟಿಂಗಿನಲ್ಲಿ ಹೀಗೆ ಒಬ್ಬ ಸದಸ್ಯರಿಗೆ ಹೊಡೆದು ಅವಮಾನ ಮಾಡಿದರು. ಇವರು ಪ್ರಜಾಪ್ರಭುತ್ವದ ನೀತಿ

(ಶ್ರೀ ವಾಟಾಳ್ ನಾಗರಾಜ್)

ಗಳನ್ನು ದೇಶದಲ್ಲಿ ತರಕೂಡದು ಎಂದು ಹೇಳಲು ಹೊರಟಿದ್ದಾರೆ. ಮಾನ್ಯ ಅಧ್ಯಕ್ಷರು ಬೇಕಾದರೆ ಇದರ ರಿಕಾರ್ಡುಗಳನ್ನು ತರಿಸಿ ಪರಿಶೀಲಿಸಬಹುದು. ಮಾನ್ಯ ಸದಸ್ಯರಾದ ಶ್ರೀ ಅಮರೋಪವಂರವರು ಕಾಂಗ್ರೆಸ್ಸು ಹೆಸರಿನಲ್ಲಿ ನಾವು ಬಹಳ ಮಾಡಿದ್ದೇವೆ ಎಂದು ಹೇಳಿದರು. ಅದಕ್ಕಾಗಿ ನಾನು ಇಲ್ಲಿ ಆ ಸದಸ್ಯರಿಗೆ ಉತ್ತರ ಕೊಡಬೇಕಾಗಿದೆ. ಸುಮಾರು ಹದಿನೆಂಟು ವರ್ಷಕಾಲ ಕಾಂಗ್ರೆಸ್ಸಿನವರು ಬೆಂಗಳೂರು ನಗರ ಕಾರ್ಪೊರೇಷನ್ನಿನಲ್ಲಿ ಆಡಳಿತ ನಡೆಸುತ್ತಿದ್ದರು ಆ ನಂತರ ಎರಡು ವರ್ಷಗಳ ಕಾಲ ವಿರೋಧ ಪಕ್ಷದವರು ಕಾರ್ಪೊರೇಷನ್ ಆಡಳಿತ ನಡೆಸಿದರು. ವಿರೋಧ ಪಕ್ಷದವರು ಆಡಳಿತ ನಡೆಸಿದ ಕಾಲದಲ್ಲಿ ಏನಾದರೂ ಲೋಪವಾಗಿದೆ ಎನ್ನುವುದನ್ನು ಹೇಳುವುದು ನಾವಲ್ಲ. ಇದಕ್ಕೆ ತಮ್ಮ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡಿ ಆಗ ಇವೆರಡು ವರ್ಷದ ವಿಚಾರಗಳನ್ನು ಅಲ್ಲಿ ವಿಚಾರ ಮಾಡಬಹುದು.

ಶ್ರೀ ಎ. ನಂಜಪ್ಪ.—ಒಂದು ವರ್ಷವೇ ಆಡಳಿತ ನಡೆಸುವುದಕ್ಕೆ ಆಗಲಿಲ್ಲ. ಎರಡು ವರ್ಷ ಮಾಡಿದೆವು ಎಂದು ಇಲ್ಲಿ ಹೇಳುತ್ತಾರೆ.

ಶ್ರೀ ವಾಟಾಳ್ ನಾಗರಾಜ್.—ಇದಕ್ಕಾಗಿಯೇ ಇಲ್ಲಿ ನಾನು ಸಲಹೆ ಮಾಡುವುದು. ತಮ್ಮ ಮಾನ್ಯ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಿಸಿ. ನಮ್ಮಿಂದ ಯಾವ ರೀತಿಯಾಗಿ ಅನ್ಯಾಯಗಳು ನಡೆದಿವೆ ಎನ್ನುವುದನ್ನು ತಾವು ತೀರ್ಮಾನಮಾಡಿದರೆ ಆಗ ತಾನು ಏನು ಶಿಕ್ಷೆ ವಿಧಿಸಿದರೂ ಅದನ್ನು ಒಪ್ಪಿಕೊಳ್ಳುವುದಕ್ಕೆ ತಯಾರಾಗಿದ್ದೇವೆ. ಇಂತಹ ಒಂದು ಚಾರಿತ್ರಿಕ ನಮ್ಮ ಮಾನ್ಯ ಕಾಂಗ್ರೆಸ್ ಸದಸ್ಯರು ಒಪ್ಪುತ್ತಾರೆಯೇ, ಕೇಳಿ.

ಆ ಮೇಲೆ ನಮ್ಮ ಬೆಂಗಳೂರು ನಭೆಗೆ ಸೇರಿದ ಚಲುವಾದಿಪಾಳ್ಯ ಎಂಬಲ್ಲಿ ಹರಿಜನರಿಗಾಗಿ ಸುಮಾರು 81 ಸ್ಯೆಟುಗಳನ್ನು ಕೊಡಬೇಕು ಹಾಗೂ ಮನೆ ಇಲ್ಲದ ಬಡವರಿಗೆ ಈ ಸ್ಯೆಟುಗಳನ್ನು ಕೊಡಬೇಕೆಂದು ಇತ್ತು. ಇದನ್ನು ನಮ್ಮ ಕಾಂಗ್ರೆಸ್ಸು ಭಕ್ತರು ಯಾರಿಗೂ ಹೇಳದೇ ಕೇಳದೇ ರಾತ್ರೋರಾತ್ರಿಯಲ್ಲಿ ತಮ್ಮ ತಮ್ಮೊಳಗೇನೇ ಇದನ್ನು ಪೂರ್ತಿ ಹಂಚಿಕೊಂಡರು ! ಇಂತಹವರು ಕಾಂಗ್ರೆಸ್ಸು ಪಕ್ಷದಲ್ಲಿದ್ದುಕೊಂಡು ಸೂಪರ್‌ಸೆಷನ್ ಮಾಡಲಿಕ್ಕೆ ಕಾರಣರಾದರು. ಕಾಂಗ್ರೆಸ್ಸಿನವರು ಕಾರ್ಪೊರೇಷನ್ನನ್ನು ಸೂಪರ್‌ಸೀಡು ಮಾಡಬೇಕೆಂದು ಸರ್ಕಾರ 14 ಚಾರ್ಜುಗಳನ್ನು ತಂದಿದ್ದರು. ಇವೆಲ್ಲವನ್ನೂ ನಗರ ನಭೆಯ ಸದಸ್ಯರ ಮೇಲೆ ತಂದಿದ್ದರೂಕೂಡ ವಿರೋಧ ಪಕ್ಷದ ಸದಸ್ಯರ ಮೇಲೆ ಒಂದು ಚಾರ್ಜನ್ನೂ ಪ್ರೂವ್ ಮಾಡುವುದಕ್ಕೆ ಆಗಲಿಲ್ಲ. ರಾಜಕೀಯ ಕಾರಣಕ್ಕೋಸ್ಕರ ನಗರ ನಭೆಯನ್ನು ರದ್ದುಮಾಡಿದರೇ ಏನಾ ಬೇರಾವ ಕಾರಣಕ್ಕೂ ಇದನ್ನು ರದ್ದುಮಾಡಲಿಲ್ಲ. ಇದು ಎಲ್ಲರಿಗೂ ಗೊತ್ತಿದೆ. ಜನತೆಗೂ ಗೊತ್ತಿದೆ. ಇಂದು ಇಲ್ಲಿ ಈ ಕಾರ್ಪೊರೇಷನ್ನಿಗೆ ಚುನಾವಣೆಗಳನ್ನು ನಡೆಸಬೇಕೆಂದು ಜನರ ಒತ್ತಾಯದ ಮೇಲೆ ಅದನ್ನು ಸಮರ್ಥಿಸಬೇಕೆಂದು ತರುತ್ತಿದ್ದೀರಿ. ಇದಕ್ಕಾಗಿ ನಾನು ನಮ್ಮ ಮಾನ್ಯ ಸ್ಪೀಟು ಮಂತ್ರಿಗಳಾದ ಶ್ರೀ ಮಾನ್ ಬಿ. ಎಂ. ಪಾಟೀಲರವರಿಗೆ ನನ್ನ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಮತ್ತು ಇದಕ್ಕಾಗಿ ಸಂತೋಷ ಪಡುತ್ತೇನೆ. ಚುನಾವಣೆಗಳನ್ನು ನಡೆಸಲೇಬೇಕು ಅದನ್ನು ನಡೆಸಿ.

ಇನ್ನೊಂದು ವಿಚಾರ ಇಲ್ಲಿ ಹೇಳಬೇಕಾಗಿದೆ. ತ್ರಿವೇಣಿ ಟಾಕೀಸ್ ಎಂದು ನಮ್ಮ ಸಿಟಿಯಲ್ಲಿರುವುದು ಎಲ್ಲರಿಗೂ ಗೊತ್ತಿದೆ. ಬಿ.ಸಿ.ಡಿ.ಸಿ. ಅಧ್ಯಕ್ಷರಾಗಿದ್ದವರು ಇದನ್ನು ಕೊಂಡು ಕೊಂಡಿದ್ದಾರೆ. ಇದು ಆಗುವುದಕ್ಕೆ ಮುಂಚೆ ಇಲ್ಲಿ ಎಂಟು ಗುಡಿಸಲುಗಳಿದ್ದವು. ಇವರಿದ್ದ ಜಾಗವನ್ನು ತೆಗೆದುಕೊಂಡು ಇಲ್ಲಿನ ಬಡವರಿಗೆ ಬಹಳ ತೊಂದರೆ ಮಾಡಿದ್ದಾರೆ. ಇದನ್ನು ನಮ್ಮ ಗಾಂಧಿ ಭಕ್ತರು ಒಪ್ಪಿಕೊಳ್ಳುವುದಕ್ಕೆ ತಯಾರಾಗಿದ್ದಾರೆಯೇ ? ಅವರಿಗೆ ತಿಂಗಳಿಗೆ ಅದರಿಂದ 18 ಸಾವಿರ ರೂಪಾಯಿ ಬಾಡಿಗೆ ಬರುತ್ತಾ ಇದೆ. ಅಲ್ಲಿ ಗುಡಿಸಲನಲ್ಲ ವಾಸ ಮಾಡುತ್ತಿದ್ದಂಥ ಜನಕ್ಕೆ ಇನ್ನೂ ಸ್ಯೆಟುಗಳು ಸಿಕ್ಕಿಲ್ಲ. ಈಗ ಕೆಂಪೇಗೌಡ ಸರ್ಕಲ್‌ನಲ್ಲಿ 7–8 ಯೂರಿನಲ್‌ಗಳ ಹಿಂದೆ ಅಂಗಡಿಗಳು ಬರಬೇಕಾಗಿತ್ತು. ಅವು ಕಾಂಗ್ರೆಸ್ಸಿನ ಜನರಿಗೆ ಸೇರಿದ್ದು. ಕಾರ್ಪೊರೇಷನ್ ಸೂಪರ್‌ಸೀಡ್ ಆದಮೇಲೆ ಒಳೊಳಗೆ ಅಧಿಕಾರಿಗಳನ್ನು ಕಟ್ಟಿಕೊಂಡು ಆ ಯೂರಿನರ್‌ಗಳನ್ನೆಲ್ಲಾ ಒಂದೇ ರಾತ್ರಿಯಲ್ಲಿ ಒಡೆದುಹಾಕಿದರು. ಇದನ್ನು ಮಾಡತಕ್ಕಂಥವರು ಕಾಂಗ್ರೆಸ್ಸಿನವರು. ಕಾಂಗ್ರೆಸ್ ಆಡಳಿತದಲ್ಲಿ ಅನ್ಯಾಯವಾಗಿದೆ. ನಿಮ್ಮ ಅಧ್ಯಕ್ಷತೆಯಲ್ಲಿ ಒಂದು ಕಮಿಟಿ ರಚನೆ ಮಾಡಿದರೆ ನಾವು ರುಜುವಾತು ಕೊಡುತ್ತೇವೆ. ನಾನು ಹೇಳುವುದರಲ್ಲಿ ತಪ್ಪೇನಾದರೂ ಇದ್ದರೆ ಈ ಅಸೆಂಬ್ಲಿಗೆ ರಾಜೀನಾಮೆ ಕೊಡುತ್ತೇನೆ. ಕಾಂಗ್ರೆಸ್ಸಿನವರಿಗೆ ಧೈರ್ಯವಿದ್ದರೆ ಈ ಸವಾಲು ಒಪ್ಪಲಿ.

ಇನ್ನು ಬೆಂಗಳೂರು ಕಾರ್ಪೊರೇಷನ್ನಿನ ಚುನಾವಣೆ ಸರ್ಕಾರದವರು ನಡೆಸುತ್ತಾರೆ ಎನ್ನುವುದು ಗೊತ್ತಾಯಿತು. ಇದಕ್ಕಾಗಿ ಬೇಕಾದಷ್ಟು ಚಳುವಳಿಯೂ ಆಯಿತು. ಬೆಂಗಳೂರಿನಲ್ಲಿ ಜನರಲ್ ಎಲೆಕ್ಷನ್ ನಡೆದಾಗ ಈಗಿನ ಬಿ.ಸಿ.ಡಿ.ಸಿ.ಸಿ. ಅಧ್ಯಕ್ಷರು ಚುನಾವಣೆಯಲ್ಲಿ ನಿಂತು ಸೋತರು. ಅದಾದ ತಕ್ಷಣ ಒಂದು ಕೆಲಸ ಬೇಕಾಗಿತ್ತು. ಅವರು ಬಿ.ಸಿ.ಡಿ.ಸಿ.ಸಿ. ಅಧ್ಯಕ್ಷರಾದರು. ಹೀಗೆ ಕಾಂಗ್ರೆಸ್‌ನವರದ್ದು ಒಂದು ಅನಾಥಾಶ್ರಮ ಇದೆ. ಅದರಲ್ಲಿ ಅಧ್ಯಕ್ಷರು, ಉಪಾಧ್ಯಕ್ಷರು ಕಾರ್ಯದರ್ಶಿಗಳು ಎಲ್ಲಾ ಚುನಾವಣೆಯಲ್ಲಿ ಸೋತವರೇ, ಅವರಿಗೆಲ್ಲಾ ಈ ಅನಾಥಾಶ್ರಮದಲ್ಲಿ ಆಶ್ರಯ ಸಿಕ್ಕಿದೆ.

ಶ್ರೀ ಡಿ. ಎಂ. ಸಿದ್ದಯ್ಯ (ಬಿಳಿಗೆರೆ).—ಸ್ವಾಮಿ, ಕಾಂಗ್ರೆಸ್ ಸಂಸ್ಥೆಯನ್ನು ಅನಾಥಾಶ್ರಮ ಎಂದು ಹೇಳುತ್ತಿದ್ದಾರೆ ಇದು ಸರಿಯೇ?

ಅಧ್ಯಕ್ಷರು.— ಒಂದು ಪಕ್ಷ ಇನ್ನೊಂದು ಪಕ್ಷವನ್ನು ಅನಾದರಣೆ ಮಾಡುವುದು ಸರಿಯಲ್ಲ.

ಶ್ರೀ ವಾಟಾಳ್ ನಾಗರಾಜ್.—ಸ್ವಾಮಿ, ಈಗ ದೇಶದಲ್ಲಿ ಅನಾಥಾಶ್ರಮ ಇರುವುದು ಅನಾಥರಾದವರನ್ನು ನೋಡಿಕೊಳ್ಳುವುದಕ್ಕೆ. ಆರೀತಿ ಗಾಂಧೀಜಿಯವರು ಮಾಡಿದ್ದಾರೆ. ಶ್ರೀಮಾನ್ ಡಿ. ಎಂ. ಸಿದ್ದಯ್ಯನವರು ಅನಾಥಾಶ್ರಮ ಅಲ್ಲ ಎಂದು ಹೇಳಿದರು. ಅವರವರಲ್ಲೇ ಒಡಕು ಬಂದಿರುವುದು ಗೊತ್ತಿದೆ. ಈಪೊತ್ತು ಬೆಂಗಳೂರಿನ ಒಬ್ಬ ಪ್ರಮುಖ ವಾಣಿಜ್ಯೋದ್ಯಮಿಯ ಅಧ್ಯಕ್ಷತೆಯಲ್ಲಿ ಬಿ.ಸಿ.ಡಿ.ಸಿ.ಸಿ. ಅಧ್ಯಕ್ಷರಿಗೆ ಒಂದು ಸಮಾರಂಭವನ್ನು ಏರ್ಪಡಿಸಿದ್ದರು. ಆ ಸಮಾರಂಭದಲ್ಲಿ ಇವರು ಬೆಂಗಳೂರಿನ ಜನತೆಗೆ ಉಚಿತ ನೀರನ್ನು ಕೊಡಿಸಿದರು, ಬೆಂಗಳೂರು ನಗರನಭೆಗೆ ಚುನಾವಣೆ ನಡೆಸಲು ಅವಕಾಶ ಮಾಡಿಕೊಟ್ಟರು ಮತ್ತು ಇನ್ನು ಏನೇನೋ ಸೌಲಭ್ಯಗಳು ಇವೆಯೋ ಅವನ್ನೆಲ್ಲಾ ಅವರೇ ಮಾಡಿಕೊಟ್ಟರು ಎಂದು ಹೇಳಿದರು. ಆದರೆ ಅವರು ಉಪಮಂತ್ರಿಗಳಾಗಿದ್ದಾಗ್ಗೆ ಏನೇನು ಬೇಕು ಬೇಕಾದ ಕೆಲಸ ಮಾಡಿದರು ಎಂದರೆ, ಕಾರ್ಪೊರೇಷನ್ ರದ್ದು ಮಾಡಿದರು, ನೀರಿನ ಮೇಲೆ ತೆರಿಗೆ ಹಾಕಿದರು, ಸ್ಯೆಕರ್ ಮೇಲೆ ತೆರಿಗೆ ಹಾಕಿದರು, ಜನತೆಯ ಮೇಲೆ ಬೇಕು ಬೇಕಾದ ತೆರಿಗೆ ಹಾಕಿದರು. ಆದರೆ ಈಪೊತ್ತಿನ ವಿರೋಧಪಕ್ಷದ ಒಂದು ಹೋರಾಟದ ಫಲವನ್ನು ತಾವು ಪಡೆಯಲು ಬಿ.ಸಿ.ಡಿ.ಸಿ.ಸಿ. ಅಧ್ಯಕ್ಷರಿಗೆ ಒಂದು ಸಮಾರಂಭ ಏರ್ಪಡಿಸಿ ಅವರೇ ಇದಕ್ಕೆ ಕಾರಣರು ಎಂದು ಹೇಳಿವ್ಯಾರೆ. 30 ಸಾವಿರ ರೂಪಾಯಿ ಹಣವನ್ನು ಬೆಂಗೂರು ಕಾರ್ಪೊರೇಷನ್ ಕಂಟ್ರಾಕ್ಟರ್‌ಗಳಿಂದ ಕಲೆಕ್ಟ್ ಮಾಡಿಕೊಳ್ಳುತ್ತಿದ್ದಾರೆ ಎಂದು ಕೇಳಿದ್ದೇನೆ. ಇದಕ್ಕಾಗಿ ಹಳೇ ಕೆಲಸಕ್ಕೆ ಹೊಸಬರ್ ಕೊಟ್ಟು ಅದರ ಮೂಲಕ ದುಡ್ಡನ್ನು ಕೆಲವು ಕಂಟ್ರಾಕ್ಟರು ಮಾಡಿಕೊಡುತ್ತಿದ್ದಾರೆ ಎಂದು ಕೇಳಿದ್ದೇನೆ ಬೆಂಗಳೂರು ನಗರನಭೆಯ ಚುನಾವಣೆಗೆ ಅವರ ಪಕ್ಷದ ಸದಸ್ಯರನ್ನು ಗೆಲ್ಲಿಸುವುದಕ್ಕೊಸ್ಕರ ಅವರು ಈ ಪಿತೂರಿಯನ್ನು ನಡೆಸುತ್ತಿದ್ದಾರೆ, ಈ ಒಂದು ಸನ್ಮಾನ ಸಮಾರಂಭವನ್ನು ಏರ್ಪಡಿಸುವ ಅಧ್ಯಕ್ಷರಿಗೆ 'ಪದ್ಮಶ್ರೀ' ಕೊಡಿಸುತ್ತಾರಂತೆ. ಅದು ಅಷ್ಟು ಸುಲಭ ಇದೆಯೇ! ಬೀದಿಯಲ್ಲಿ ಮಾತನಾಡಿದ ಹಾಗೆ ಸಿಕ್ಕುವ ವಸ್ತುವೆ? ಹೀಗೆಲ್ಲಾ ಹೇಳಿಕೊಂಡು ತಮ್ಮ ಒಂದು ಪ್ರಭಾವನ್ನು ಸಾಮಾನ್ಯ ಜನತೆಯ ಮೇಲೆ ಬೀರಿ ಒಂದು ಕೆಟ್ಟ ಪರಿಣಾಮವನ್ನು ಉಂಟು ಮಾಡಿದ್ದಾರೆ.

ಸ್ವಾಮಿ, ಇನ್ನೊಂದು ವಿಷಯವನ್ನು ಕೊನೆಯದಾಗಿ ಶ್ರೀ ಮಾನ್ ಬಿ. ಎಂ. ಪಾಟೀಲರಿಗೆ ಹೇಳಬೇಕಾಗಿದೆ. ಬೆಂಗಳೂರಿನಲ್ಲಿರುವ ಬಿ. ವಿ. ಕೃಷ್ಣಯ್ಯಂಗಾರ್ ರಸ್ತೆಯನ್ನು ವಿಶಾಲವಾಗಿರಲಿ ಎನ್ನುವ ಉದ್ದೇಶದಿಂದ ಮಾಡಿದ್ದಾರೆ. ಆದರೆ ಅದರ ಈ ಒಂದು ಉದ್ದೇಶ ನೆರವೇರದೆ ಹೋಗಿದೆ ಕಾರಣ ಎಲ್ಲಿ ರಸ್ತೆ ಮಾಡಬೇಕು ಅಲ್ಲಿ ಮಾಡದೆ ಕಾಂಗ್ರೆಸ್ಸಿನವರ ಮನೆ ಎಲ್ಲಿ ಇರುತ್ತದೋ ಅಲ್ಲಿ ಬಿಟ್ಟು ಮಾಡಿಸಿದ್ದಾರೆ. ಈ ಕೆಲಸ ಮಾಡಿರುವವರು ಶ್ರೀ ರಾಮಣ್ಣನವರು.

ಶ್ರೀಮತಿ ನಾಗರತ್ನಮ್ಮ ಹಿರೇಮಠ್ (ಗಾಂಧಿನಗರ).—ರಸ್ತೆ ವಿಚಾರ ಮಾತನಾಡುವಾಗ ಸದಸ್ಯರ ಹೆಸರನ್ನು ಹೇಳುವುದು ಸರಿಯಲ್ಲ.

ಶ್ರೀ ವಾಟಾಳ್ ನಾಗರಾಜ್.—ಶ್ರೀಮತಿ ನಾಗರತ್ನಮ್ಮನವರು ನನಗೆ ಪಾಠ ಹೇಳಬೇಕಾಗಿಲ್ಲ. ನನಗೆ ಗೊತ್ತಿದೆ. ****

ಶ್ರೀಮತಿ ನಾಗರತ್ನಮ್ಮ ಹಿರೇಮಠ್.—ಸದಸ್ಯರು ಡೈರಕ್ಟ್ ಆಗಿ ಇನ್ನೊಬ್ಬ ಸದಸ್ಯರನ್ನು **** ಎಂದು ಹೇಳಬಹುದೋ ಎಂದು ಅಧ್ಯಕ್ಷರನ್ನು ಕೇಳುತ್ತೇನೆ.

ಅಧ್ಯಕ್ಷರು.—ಡೈರಕ್ಟ್ ಆಗಿ ಒಬ್ಬ ಸದಸ್ಯರು ಇನ್ನೊಬ್ಬ ಸದಸ್ಯರನ್ನು **** ಎಂದು ಹೇಳಬಾರದು.

**** Expunged under orders of the Chair.

ಶ್ರೀಮತಿ ನಾಗರತ್ನಮ್ಮ ಹಿರೇಮಠ.—ಅಧ್ಯಕ್ಷರು ಮಾನ್ಯ ಸದಸ್ಯರು ಅಡಿದಂಥ ಮಾತು ಗಳನ್ನು ಹಿಂತೆಗೆದುಕೊಳ್ಳಬೇಕು.

ಅಧ್ಯಕ್ಷರು.—ನಾನು ಆ ಮಾತುಗಳನ್ನು ಎಕ್ಸ್‌ಪಂಜ್ ಮಾಡುತ್ತೇನೆ. ಮಾನ್ಯ ಸದಸ್ಯರಿಗೆ ಕೊಟ್ಟಿರುವ ವೇಳೆ ಆಗಿರುವುದರಿಂದ ಬೇಗ ಮುಗಿಸಬೇಕು.

ಶ್ರೀ ವಾಟಾಳ್ ನಾಗರಾಜ್.—ಬಿ. ಎ. ಕೃಷ್ಣ ಐಯ್ಯಂಗಾರ್ ರಸ್ತೆ ಈವೊತ್ತು ಏನಾಗಿದೆ ಎಂದರೆ ಸರಿಯಾದ ಪ್ಲಾನ್ ಮಾಡಿ ಕೊಡದೆ ಇರುವುದರಿಂದ ಎಲ್ಲ ಕಡೆಯೂ ಅವರವರ ಇಷ್ಟ ಬಂದ ಹಾಗೆ ಮಾತಿಕೊಳ್ಳುತ್ತ ಇದ್ದಾರೆ. ಯಾರು ಏನು ಬೇಕಾದರೂ ಮಾಡಿಕೊಳ್ಳಲಿ ಎಂದು ಕಾರ್ಪೊರೇಷನ್‌ನವರು ಭಾವಿಸಿದ್ದಾರೆಂದು ಕಾಣುತ್ತದೆ. ಇದು ಸರಿಯುಲ್ಲ ಎನ್ನುವ ಮಾತನ್ನು ಈ ಸಭೆಯಲ್ಲಿ ತಿಳಿಸುತ್ತ ಹಿಂದೆ ಈ ನಗರ ಸಭೆಯ ಚುನಾವಣೆಗಳಲ್ಲಿ ಕೆಲವು ಬೀಸಲು ಸ್ಥಾನಗಳಿದ್ದುವು..... ...

ಅಧ್ಯಕ್ಷರು.—ಮಾನ್ಯ ಸದಸ್ಯರು ಭಾಷಣವನ್ನು ಬೇಗನೇ ಮುಗಿಸಬೇಕು.

ಶ್ರೀ ವಾಟಾಳ್ ನಾಗರಾಜ್.—ಹೆಚ್ಚು ಮಾತನಾಡಲು ಅಧ್ಯಕ್ಷರು ವೇಳೆ ಇಲ್ಲ ಎಂದು ಒಂದೇ ಸಮನೆ ಹೇಳುತ್ತಿರುವುದರಿಂದ ಇಷ್ಟು ಮಾತ್ರ ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Mr. SPEAKER.—I will put the motion to the House. The question is :

"That the City of Bangalore Municipal Corporation (Amendment) Bill, 1969, be taken into consideration."

The motion was adopted.

Sri L. SRIKANTAIAH.—(Nanjangud) I beg to move :

"That the City of Bangalore Municipal Corporation (Amendment) Bill, 1969, be referred to a a Select Committee."

Mr. SPEAKER.—Motion moved :

"That the City of Bangalore Municipal Corporation (Amendment) Bill, 1969, be referred to a Select Committee."

Sri L. SRIKANTAIAH.—Sir, I request that the Bill may be referred to a Select Committe for the following reasons :

The amendments enumerated in the Amendment Bill are not ordinary amendments. They have far-reaching consequences. To list here only a few, I wish to draw the attention of the House to the following :

The Amendment Bill requires the utmost and careful consideration of a Committee. For instance, let me take Clause 11—insertion of new Schedule VIII. As we are aware, hitherto the elections to the Municipal Council were held on the basis of electoral rolls prepared under the provisions of the Representation of the People's Act and the rules made thereunder. Now in this new Bill, an amendment is brought in to the effect that the Corporation shall prepare its own electoral roll and in Schedule VIII some model rules are framed ; as far as possible, wherever the Commissioner is also empowered, to issue instructions or to frame such rules as are necessary. We know quite well with what great care the Parliament has prepared the Representation of the People's

Act and the preparation of electoral rolls. Here I find those provisions are totally absent. Let me give you a simple illustration of the problem. We are aware how during these 15 days innumerable writs have been filed in the High Court of Mysore on the sole ground that even after nominations began for elections to the Taluk Board, the Electoral Officer was pleased to admit new voters. Even in the Municipal Elections this happened and writ petitions are pending in this connection also. If we go through the entire clause, we do not find any rule to the effect that immediately after the notification is made, the Electoral Officer shall stop registration of voters. Moreover, the forms of objections and the way the electoral rolls should be prepared are not discussed in Schedule VIII. These are very important matters. More than that, I think it is necessary that the Committee should consider this aspect. The preparation of electoral roll by the Corporation is not an ordinary affair. It is an expensive one. I do not know why the electoral roll of the Legislative Assembly could not be adopted for this purpose. We know under the Representation of the People's Act, annual revision, intensive revision and summery revision are there. There is an Electoral Officer for the State of Mysore and the Chief Election Commissioner for India. The Electoral Officer could as well take up the task of either intensive revision or summary revision or annual revision and get the voters' list printed for the Legislative Assembly and the Parliament. Why this duplication of work ? Therefore, it is absolutely necessary that a Committee be appointed for this purpose to consider these proposals made by the Government. This matter cannot be discussed on the floor of the House within 1½ hours or half-an-hour at our disposal because these are all complicated matters and they have to be examined by a body of experts who could go through the provisions leisurely.

The second aspect to which I wish to draw the attention of the House is, Section 104 relating to Property tax from whom and when payable. I think this is another most interesting and complicated affair. My learned friend Sri Nagappa was quite right in drawing the attention of the Chair about the constitutionality of some of these provisions in this Act. Some of the provisions here are *ultra vires* of the Constitution and the Courts may declare them so. Apart from that, care must be taken by us to see that as far as possible that we enact legislation in conformity with the Constitution and not violating any article of the Constitution. Therefore, whatever Government wants to do about Section 104, let it be examined carefully by a Select Committee. While enacting Section 104 I think it is better that a Committee takes the evidence of the Government or the authorities of the Corporation who may place before the Committee the need for substitution of section 104. I do not think the hon. Minister Sri Puttaswamy can place before the House all the difficulties experienced by the Corporation or the Administrator or his administration. There are legal difficulties. There are ancillary difficulties. On the other hand, those difficulties can be placed before a Committee and that Committee can take into account the difficulties experienced by the Administrator while

(SRI L. SRIKANTAIAH)

running the Corporation and if there are any difficulties or loopholes in the Corporation Act, 1964, they can be amended and listed in a proper manner.

So far as the holding of elections to the Bangalore City Corporation is concerned, I welcome it. Some of my friends may argue that if the Bill is referred to a Select Committee, we cannot hold elections. I think the Government can hold elections by other means. If it is referred to a Select Committee it will take a long time and the question would be whether the elections would be postponed. If the Government is anxious to hold the elections to the Corporation immediately, other steps can be thought of. In the meanwhile, the Select Committee may go through all these provisions and scrutinise the amendments before they are brought to this House. I think, within the time at our disposal we cannot do justice to the amendment Bill because important provisions are involved. We do not know what we are amending in the original Act. The argument might be that most of the members could have thought over the matter and convinced the House with regard to the feasibility or non-feasibility of certain amendments.

4-30 P.M.

As pointed out by Sri Shamanna some of the provisions are very difficult to follow. So, I request that the Bill may be referred to a Select Committee.

† SRI M. NAGAPPA.—Sir, apart from section 104A there are some provisions which are very important. For instance, take clause 5. I wanted to take part in the debate but could not do so as there was no time. For instance, look at the proviso. This is a fundamental right. So many times we have seen that names of persons who were in jail have been enrolled in the voters list and they have been allowed to contest the elections. But by this proviso, the right to vote has been taken away. This definitely infringes the right of a citizen who is entitled to get himself enrolled and vote. Such a provision is found neither in the Representation of Peoples Act nor in any other law. I therefore suggest that this Bill may be referred to a Select Committee.

The normal procedure is that we should enact short Bills leaving delegated legislation to the Executive. But here we have taken upon ourselves the burden of subordinate legislation by adding Schedule VIII. Suppose any amendment is required to Schedule VIII, that has to come before the House. This will put us in an awkward position.

I also wish to submit that the Commissioner is also given vast powers under sub-section 4 of section 104.

With these submissions, I support the suggestion made by the hon. Member Sri Srikantiah to refer this Bill to a Select Committee.

Even at this stage if the Hon'ble Minister is prepared to withdraw the proviso in clause 5 and sub-section 4 of section 104, we have no objection for passing of this Bill. We do not want to bring any hurdle to the Government. If the Government is anxious to hold elections in Bangalore City, we are more anxious than the Government. If the Government does not want to make it a controversial Bill, let them withdraw those two provisions which I have suggested. Otherwise, let the Bill be referred to a Select Committee. I hope the Government will consider this matter very seriously.

Sri L. SRIKANTAIAH.—I wish to draw the attention of the Hon. Minister that it is impossible to make out the meaning of the words used in sections 104 and 105. It is hurriedly and poorly drafted.

Mr. SPEAKER.—The hon. Member may refer to it when the clause comes up for consideration.

† ಶ್ರೀ ಬಿ. ಎಂ. ಪಾಟೀಲ್.—ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಮಿತ್ರರನೇಕರು ಈಗಾಗಲೇ ಈ ತಿದ್ದುಪಡಿ ವಿಧೇಯಕದಮೇಲೆ ಮಾತನಾಡಿದ್ದಾರೆ, ಇದರಲ್ಲಿ ಬಹಳ ಮುಖ್ಯವಾದ ಮತ್ತು ಮಹತ್ವವುಳ್ಳ ಅಂಶಗಳಿವೆ, ಸೆಕ್‌ಷನ್ 104 (ಎ), ಷೆಡ್ಯೂಲು 8 ಮುಂತಾದುವೆರ್ಲಾ ಬಹಳ ಮುಖ್ಯವಾದುವು ಎಂದು ಹೇಳಿದ್ದಾರೆ. ಷೆಡ್ಯೂಲು 8 ರಲ್ಲಿ ನಾವೇನು ಕಾಣಿಸಿದ್ದೇವೆ ಅದು 1969 ರಪ್ರೀಪಲ್ಸ್ ರೆಪ್ರಸೆಂಟೇಷನ್ ಆಕ್ಟನಲ್ಲಿರುವುದು, ಅದನ್ನು ಇನ್ನೂ ಬದರಾಯಿಸಿಲ್ಲ, ಆದರಲ್ಲಿ ಹೇಗಿದೆಯೋ ಹಾಗೆ ಕಾಣಿಸಿದೆ. ಮಾನ್ಯ ಸದಸ್ಯರು ಈ ರೆಪ್ರೆಸೆಂಟೇಷನ್ ಆಕ್ಟನ್ನು ಸ್ವಲ್ಪ ತುಲನೆಮಾಡಿನೋಡಿ ಅದೇ ರೀತಿಯಲ್ಲಲ್ಲದಿದ್ದರೆ, ಆಗ ಹೇಳಿದರೆ ಒಪ್ಪಿಕೊಳ್ಳಬಹುದು.

ವಿಧೇಯಕವನ್ನು ತರಬೇಕಾದರೆ ಮೊದಲನ ಕ್ಲಾಜುಗಳನ್ನೂ ನಮೂದುಮಾಡಬೇಕಾಗಿತ್ತು, ಯಾವ ಕ್ಲಾಜನ್ನು ಬದರಾಯಿಸುತ್ತಾರೋ ಅದನ್ನು ವಿಧೇಯಕದ ಜೊತೆಯಲ್ಲಿ ಕೊಟ್ಟಿಲ್ಲ, ಹಾಗೆಯೇ ಇನ್ನೂ ಕೆಲವು ಕೊಡಬೇಕಾಗಿತ್ತು ಎಂದು ಶ್ರೀ ನಾಗಪ್ಪನವರು ಹೇಳಿದರು. ಆಕ್ಟನಲ್ಲಿರುವುದರಲ್ಲಿ ಯಾವುದನ್ನು ಬದರಾಯಿಸಲು ಸೂಚನೆಯಿದೆ ಅದನ್ನು ಕೊಟ್ಟಿದೆ. 47 (ಎ) ಎಂಬ ಹೊಸ ಕ್ಲಾಜನ್ನು ಸೇರಿಸರಾಗಿದೆ, ಅದು ಒರಿಜಿನರ್ ಅಲ್ಲ.

ಶ್ರೀ ಎಂ. ನಾಗಪ್ಪ.—ರೂರ್ಸ್ ಪ್ರಕಾರ ನಮಗೆ 7 ದಿವಸಗಳಾದರೂ ಕಾಲಾವಕಾಶ ಕೊಡಬೇಕು, ಹಾಗೆ ಕೊಡದಿರುವುದರಿಂದ ನಾವು ವಿಧೇಯಕವನ್ನು ನೋಡಿ ಚರ್ಚೆಮಾಡಲು ಕೊಂದರೆಯಾಗಿದೆ ಎಂದು ನಾನು ಹೇಳಿದೆ, ಹಿಂದಿನದನ್ನು ಕೊಡಲಿಲ್ಲ ಎಂಬುದು ನನ್ನ ಅಕ್ಷೇಪಣೆಯಲ್ಲ.

ಶ್ರೀ ಬಿ. ಎಂ. ಪಾಟೀಲ್.—ಶ್ರೀ ಕೃಷ್ಣನ್‌ರವರು 47 (ಎ) ಕ್ಲಾಜು ಹೊಸದು, ಕೆಲವು ಕ್ಲಾಜುಗಳನ್ನು ಕೊಟ್ಟಿಲ್ಲ ಎಂದು ಹೇಳಿದರು. ತಿದ್ದುಪಡಿಮಾಡಿರುವ ಕ್ಲಾಜುಗಳನ್ನೆರ್ಲಾ ಕೊಡರಾಗಿದೆ. ಹೊಸ ಕ್ಲಾಜಿಗೆ ಅವರು ಹೇಳುವುದು ಅನ್ವಯಿಸುವುದಿಲ್ಲ.

ಅಧ್ಯಕ್ಷರು.—ಸೆಲೆಕ್ಟ್ ಕಮಿಟಿಗೆ ಕಳಿಸಬೇಕೆಂದು ಹೇಳಿದ್ದಾರೆ, ಆ ವಿಚಾರ ಹೇಳಿ.

ಶ್ರೀ ಬಿ. ಎಂ. ಪಾಟೀಲ್.—ಸೆಲೆಕ್ಟ್ ಕಮಿಟಿಗೆ ಕಳಿಸಲು ಅಂಥ ಮಹತ್ವರವಾದ ಅಂಶಗಳೇನೂ ಇಲ್ಲ, ಇದರಲ್ಲಿ ಅಮೂಲಾಗ್ರವಾದ ಬದರಾಣಿಯನ್ನೇನೂ ಮಾಡಿಲ್ಲ, ಹೊಸ ಕ್ಲಾಜು ಅಂಥ ಮಹತ್ವದ್ದೇನೂ ಇಲ್ಲ. ಇದು ಸೆಲೆಕ್ಟ್ ಕಮಿಟಿಗೆ ಹೋಗುವುದು ಸೂಕ್ತವಲ್ಲವಾದುದರಿಂದ ಅದಕ್ಕೆ ಒಪ್ಪುವುದಕ್ಕಾಗುವುದಿಲ್ಲ ಆದರ ಅವಶ್ಯಕತೆಯಿಲ್ಲ ಎಂಬ ಭಾವನೆ ಇದೆ.

ಮಾನ್ಯ ಶಾಮಣ್ಣನವರು ಕೆಲವು ಅಂಕಿಅಂಶಗಳನ್ನು ಕೊಟ್ಟಿದ್ದಾರೆ, ಆಸ್ತಿ ತೆರಿಗೆ ಬಹಳ ಕಡಮೆಯಾಗುತ್ತಿದೆಯೆಂದು ಹೇಳಿದ್ದಾರೆ. ಈಗಾಗಲೇ ಅಂಕಿಅಂಶ ಕೊಡರಾಗಿದೆ, ಮತ್ತೆ ಬೇಕಾದರೆ ಕೊಡುವುದಕ್ಕೆ ಸಿದ್ಧವಾಗಿದ್ದೇನೆ. ಆಸ್ತಿ ತೆರಿಗೆ ಹೆಚ್ಚುತ್ತಿದೆ. ಮಾನ್ಯ ಸದಸ್ಯರು ಯಾವರೀತಿ ಅಂಕಿ ಕೊಟ್ಟರೋ ಗೊತ್ತಿಲ್ಲ.

1965-66ರಲ್ಲಿ 73 ಲಕ್ಷ 1966-67ರಲ್ಲಿ 1 ಕೋಟಿ 14ಲಕ್ಷ, 1967-68ರಲ್ಲಿ 1 ಕೋಟಿ 40 ಲಕ್ಷ ಈ ರೀತಿ ಹೆಚ್ಚುತ್ತಾ ಇದೆ. ಪ್ರಾಪರ್ಟಿ ಟ್ಯಾಕ್ಸ್ ಕೂಡ ಹೆಚ್ಚಾಗಿ ವಸೂಲು ಮಾಡುತ್ತಾ ಇದ್ದೇವೆ ಎಂದು ಇಷ್ಟು ಮಾತ್ರ ಹೇಳುತ್ತೇನೆ.

(ಶ್ರೀ ಬಿ. ಎಂ. ಪಾಟೀಲ್)

ಕಾರ್ಪೊರೇಷನ್ನನ್ನು ಸೂಪರ್‌ಸೀಡ್ ಮಾಡುವಾಗ ರಾಜಕೀಯ ಕಾರಣಕ್ಕಾಗಿ ಮಾಡಲಾಗಿದೆ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಇದು ಸತ್ಯವಲ್ಲ ಎಂದು ಹೇಳುತ್ತೇನೆ. ಸೂಪರ್‌ಸೀಡ್ ಮಾಡಿದ ನಂತರ ಅದು ಹೈಕೋರ್ಟಿಗೆ ಹೋಯಿತು, ಅವರು ಸರ್ಕಾರದವರು ಏನು ಆರ್ಡರ್ ಮಾಡಿದ್ದಾರೆ ಅದನ್ನು ಎತ್ತಿ ಹಿಡಿದಿದ್ದಾರೆ ಎಂಬುದನ್ನು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ.

ಕಾರ್ಪೊರೇಟರುಗಳು ಯಾವ ರೀತಿ ಇರಬೇಕು, ಯಾವ ಮಟ್ಟದ ಜನ ಅಲ್ಲಿಗೆ ಬರಬೇಕು ಎಂಬುದನ್ನು ಹೇಳುತ್ತಾ ಇದ್ದರು. ಪ್ರಜಾಸತ್ತೆಯಲ್ಲಿ ಜನತೆಯ ವಿಶ್ವಾಸವನ್ನು ಗಳಿಸಿರತಕ್ಕ ಜನ ಅಲ್ಲಿಗೆ ಬರಬೇಕು. ಯಾವ ರಾಜಕೀಯ ಪಕ್ಷದವರೇ ಆಗಿರಲಿ ಜನತೆಯಲ್ಲಿ ಸಮಾಜದಲ್ಲಿ ಒಳ್ಳೆಯವರು ಕೆಟ್ಟವರು ಇದ್ದೇ ಇರುತ್ತಾರೆ, ಅದೇ ರೀತಿ ರಾಜಕೀಯ ಪಕ್ಷಗಳೂ ಇರುತ್ತವೆ, ಅದ್ದರಿಂದ ಜನತೆಯ ವಿಶ್ವಾಸವನ್ನು ಗಳಿಸಿರತಕ್ಕವರು ಬಂದರೆ ಅವರಿಗೆ ಒಳ್ಳೆಯದಾಗುತ್ತದೆ ಎಂದು ಹೇಳುತ್ತೇನೆ.

ಮಾನ್ಯ ಸದಸ್ಯರೊಬ್ಬರು ಬಾಡಿಗೆ ಜಾಸ್ತಿಯಾಗುತ್ತದೆ ಎಂದು ಹೇಳಿದರು, ಆ ರೀತಿ ಬಾಡಿಗೆ ಜಾಸ್ತಿಯಾಗುವುದಿಲ್ಲ, ರೆಂಟ್ ಕಂಟ್ರೋಲ್ ಆಕ್ಟ್ ಪ್ರಕಾರ ಎಷ್ಟು ಆಗುತ್ತದೆಯೋ ಅಷ್ಟೆ ಏನಹ ಹೆಚ್ಚು ಬಾಡಿಗೆ ಆಗುತ್ತದೆ ಎಂಬ ವಾದ ಸರಿಯಲ್ಲ ಎಂದು ಹೇಳುತ್ತೇನೆ.

ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ಸಲುವಾಗಿ ಮಾತನಾಡಿದ್ದಾರೆ. ಈಗಾಗಲೇ ರೂಲ್ಸ್‌ನ್ನು ಪಿ. ಎಸ್. ಸಿ. ಅವರ ಒಪ್ಪಿಗೆಗೆ ಕೊಟ್ಟಿದ್ದಾರೆ. ಅದನ್ನು ಆಡಳಿತಗಾರರು ಸರ್ಕಾರಕ್ಕೆ ಕಳುಹಿಸಿದ ನಂತರ ತೀವ್ರವಾಗಿ ಕಾರ್ಯ ರೂಪದಲ್ಲಿ ತರುತ್ತೇವೆ ಎಂದು ಹೇಳುತ್ತೇನೆ.

ಎರೆಕ್ಕೊರರ್ ರೋರ್ ವಿಷಯ ಹೇಳಿದ್ದಾರೆ. ಪೀಪರ್ಸ್ ರೆಪ್ರಸೆಂಟ್ಟೇಷನ್ ಆಕ್ಟ್ ಏನಿದೆ ಅಷ್ಟೆ ಇದು ಒಳಗೊಂಡಿದೆ ಎಂದು ಹೇಳಲಿಚ್ಛಿಸುತ್ತೇನೆ. ಹುಬ್ಬಳ್ಳಿ, ಧಾರವಾಡ ಮತ್ತು ಇನ್ನಿತರ ಕಾರ್ಪೊರೇಷನ್‌ದೊಳಗೂ ಎರೆಕ್ಟೊರರ್ ರೋರ್ ತಯಾರುಮಾಡಿ ಚುನಾವಣೆ ನಡೆಸಬಾರದು ಎಂದು ಮಾನ್ಯ ಸದಸ್ಯರ ಅಭಿಪ್ರಾಯ ಇದೆ. ಜನರರ್ ಎರೆಕ್ಷನ್‌ಗೆ ಒಂದು ಎರೆಕ್ಕೊರರ್ ರೋರ್ ತಯಾರು ಮಾಡುತ್ತೇವೆ, ಅದನ್ನು ಚಾಲೆಂಜ್‌ಮಾಡಿ ಹೈಕೋರ್ಟಿನಲ್ಲಿ ಅನೇಕ ಕೇಸುಗಳು ನಡೆಯುತ್ತಾ ಇವೆ. ಅದ್ದರಿಂದ ಈಗ ಹೊಸದಾಗಿ ಎರೆಕ್ಟೊರರ್ ರೋರ್ ತಯಾರು ಮಾಡಬೇಕೆಂದು ಅನ್ನುವಾಗ ಪೀಪರ್ಸ್ ರೆಪ್ರೆಸೆಂಟ್‌ಷನ್ ಆಕ್ಟ್‌ಗೆ ಅನುಸಾರವಾಗಿ ಮಾಡಬೇಕಾಗುತ್ತದೆ ಅದನ್ನು ಮಾಡುತ್ತಾ ಇದ್ದೇವೆ ಎಂದು ಹೇಳಲಿಚ್ಛಿಸುತ್ತೇನೆ.

ಶಿಕ್ಷಣ ಸಂಸ್ಥೆಗಳು, ಹ್ಯಾಸೆರ್‌ಗಳು ಇವುಗಳೆಲ್ಲದರ ಮೇರೆ ಪ್ರಾಪರ್ಟಿ ಟ್ಯಾಕ್ಸ್ ಹಾಕುವುದರಿಂದ ಬಹಳ ಅನಾನುಕೂಲವಾಗುತ್ತದೆ. ಆ ರೀತಿ ಹಾಕುವುದು ಸೂಕ್ತವಲ್ಲ ಎಂದು ಹೇಳಿದರು. ಈಗ ಒಂದು ಆ ಪ್ರೊವಿಜನ್ ಇರಲಿಲ್ಲ. ಆ ಪ್ರೊವಿಜನ್ ಮಾಡಲಕ್ಕೆ ಸೇರಿಸಿದ್ದೇವೆ ಎಂದು ಹೇಳಲಿಚ್ಛಿಸುತ್ತೇನೆ.

ಬೆಂಗಳೂರು ಮುನಿಸಿಪಲ್ ಕಾರ್ಪೊರೇಷನ್ ಚುನಾವಣೆಯನ್ನು ಯಾವಾಗ ಮಾಡಲಾಗುತ್ತದೆ ಎಂದು ಕೇಳಿದ್ದಾರೆ. ಈ ಚುನಾವಣೆಗಳು ಆಗಬೇಕೆಂದು ಮಾನ್ಯ ಸದಸ್ಯರು ಎಷ್ಟು ತೀವ್ರವಾಗಿ ಅಪೇಕ್ಷೆಪಡುತ್ತಾರೋ ಅದಕ್ಕಿಂತ ತೀವ್ರವಾಗಿ ಮಾಡಲಕ್ಕೆ ಸರ್ಕಾರ ಆತುರಪಡುತ್ತಾ ಇದೆ ಎಂದು ಹೇಳಲಿಚ್ಛಿಸುತ್ತೇನೆ.

ಮಾನ್ಯ ಸದಸ್ಯರು ಅನೇಕ ವಿಷಯಗಳನ್ನು ಹೇಳಿದ್ದಾರೆ ಅವುಗಳೆಲ್ಲಕ್ಕೂ ಉತ್ತರ ಕೊಡಲು ನಾನು ಇಚ್ಛಿಸುವುದಿಲ್ಲ. ಮಾನ್ಯ ಸದಸ್ಯರು ಈ ಬಿಲ್ಲಿಗೆ ಒಪ್ಪಿಗೆ ಕೊಡಬೇಕು ಒಪ್ಪಿಗೆ ಕೊಟ್ಟು ತೀವ್ರ ಚುನಾವಣೆ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತೀರಿ ಎಂದು ನಂಬಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಟಿ. ಆರ್. ಶಾಮಣ್ಣ.—ಡಿವಿಜನ್‌ಗಳನ್ನು ಸರಿಯಾಗಿ ಕಾರ್ವ್ಯಬಿಟ್ ಮಾಡಬೇಕೆಂದು ಹೇಳಿದ್ದೆ ಆ ವಿಷಯ ಹೇಳಲಲ್ಲ.

ಶ್ರೀ ಬಿ. ಎಂ. ಪಾಟೀಲ್.—ಅದನ್ನು ಸರಿಯಾಗಿ ಮಾಡಲಕ್ಕೆ ಪ್ರಯತ್ನ ಮಾಡುತ್ತಾ ಇದ್ದೇವೆ. ಯಾವಾಗಲಾದರೂ ಮಾಡಿಯೇ ಮಾಡಲಾಗುತ್ತದೆ ಎಂದು ಹೇಳಲಿಚ್ಛಿಸುತ್ತೇನೆ. ಸರ್ಕಾರ ಮಾಡಿದ್ದು ಸರಿಯಲ್ಲ ಎಂದು ಮಾನ್ಯ ಸದಸ್ಯರ ಭಾವನೆ ಇದ್ದಲ್ಲಿ ಬೇರೆ ವಿಧಾನಗಳು ಅವರಿಗೆ ಇವೆ. ಅಪೀಲು ಮಾಡಬಹುದು, ಕೋರ್ಟಿಗೆ ಹೋಗಬಹುದು. ಅಂತೂ ಮಾನ್ಯ ಸದಸ್ಯರ ಪಭಿಪ್ರಾಯವನ್ನು ಗಮನದಲ್ಲಿಟ್ಟುಕೊಂಡು ಸೂಕ್ತವಾಗಿ ಮತ್ತು ನ್ಯಾಯವಾಗಿ ಡಿವಿಜನ್‌ಗಳನ್ನು ಮಾಡಲಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಎಂ. ನಾಗಪ್ಪ.—ಬೊಂಬಾಯಿದಲ್ಲಿ, ಡೆಲ್ಲಿಯಲ್ಲಿ ಎರಡ್ಮೂದರೂ ಈ ಆಕ್ಟ್ ಚಾಲೆಂಜ್ ಆಗಿ ಈ ಪ್ರೊವಿಜನ್ ಅಪ್‌ಹೆರ್ಡ್ ಮಾಡಿರುವ ನಿದರ್ಶನ ಇದಯೇ ಎಂಬುದನ್ನು ದಯವಿಟ್ಟು ಹೇಳಬೇಕು.

ಶ್ರೀ ಬಿ. ಎಂ. ಪಾಟೀರ್.—ಆಗ ಅವರು ಅದನ್ನು ಛಾಲೆಂಜ್ ಮಾಡಿದ್ದರೋ ಇಲ್ಲವೋ ನನಗೆ ಅದು ಗೊತ್ತಿಲ್ಲ. ನಾನು ಇರತಕ್ಕ ಪರಿಸ್ಥಿತಿಯನ್ನು ಇದ್ದಹಾಗೆ ತಿಳಿಸಿದ್ದೇನೆ. ಇದನ್ನು ಛಾಲೆಂಜ್ ಮಾಡುತ್ತಾರೆಂಬುದು ಮಾನ್ಯ ಸದಸ್ಯರ ಅಭಿಪ್ರಾಯ.

ಶ್ರೀ ಎಂ. ನಾಗಪ್ಪ.—ಮೊನ್ನೆತಾನೆ ಇದೇ ವಿಚಾರದಲ್ಲಿ ನಮ್ಮ ಹೈಕೋರ್ಟ್‌ನಲ್ಲಿ ಒಂದು ಸ್ಪೆಕ್ಯರ್ ಪಾಸ್ ಮಾಡಿದ್ದಾರೆ. ಆ ಸಂಬಂಧದಲ್ಲಿ ಸರ್ಕಾರಕ್ಕೆ ರಾ ಡಿಪಾರ್ಟ್‌ಮೆಂಟಿನವರು ಒಂದು ಸಲಹೆ ಮಾಡಿದ್ದರು. ಹಾಗೆ ಆ ರಾ ಡಿಪಾರ್ಟ್‌ಮೆಂಟಿನವರು ಕೊಟ್ಟ ಲೀಗರ್ ಅಡ್ವೈಜ್ ಏನಿತ್ತು ಅದನ್ನು ಹೈಕೋರ್ಟು ತಳ್ಳಿಹಾಕಿದೆ. ಆದರೆ ಅದೇ ಹೈಕೋರ್ಟು ಇರಾಖಾ ಮೋಜ್ಕೆ ನವರು ಕೊಟ್ಟ ಸಲಹೆಯನ್ನು ಅಂಗೀಕಾರಮಾಡಿದೆ. ಆದರೆ ನಾನು ಇಲ್ಲಿ ಒಟ್ಟಿನಲ್ಲಿ ಹೇಳತಕ್ಕದ್ದು ಜನರಿಗೆ ಅನಾನುಕೂಲವಾಗಬಾರದು ಎಂಬುದನ್ನು ಒತ್ತಿ ಹೇಳುತ್ತಿದ್ದೇನೆ. ಅವರಿಗೆ ಅನಾನುಕೂಲವಾದಾಗ ಅವರು ಕೋರ್ಟಿಗೆ ಹೋಗಿ ರಿಮೆಡಿಯನ್ನು ಪಡೆಯಲಿ ಎಂದು ಹೇಳುವುದು ಅಷ್ಟು ಸರಿಯಲ್ಲ ಎಂದು ಹೇಳುತ್ತೇನೆ.

ಶ್ರೀ ಬಿ. ಎಂ. ಪಾಟೀರ್.—ಮಾನ್ಯ ಸದಸ್ಯರು ಬೇರೆ ಯಾವುದೋ ವಿಷಯವನ್ನು ಹೇಳುತ್ತಿದ್ದಾರೆ. ಅದು ಈ ಬಿಲ್ಲಿಗೆ ಸಂಬಂಧವಿಲ್ಲ. ನಾನು ಈಗ ಸಭೆಯ ಮುಂದೆ ಇಟ್ಟಿರತಕ್ಕ ಬಿಲ್ಲನ್ನು ಸಭೆಯವರು ಒಪ್ಪಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

Mr. SPEAKER.—I will put the amendment moved by the Hon. Member Sri L. Srikantiah to the vote of the House.

The question is:

"That the City of Bangalore Muncipal Corporation (Amendment) Bill, 1969, be referred to a Select Committee."

The motion was negatived.

CLAUSE 2

Mr. SPEAKER.—The question is:

"That clause 2 do stand part of the Bill."

The motion was adopted.

Clause 2 was added to the Bill.

CLAUSE 3

Sri M. NAGAPPA.—Sir, I beg to move the following amendment to clause 3:—

"That for the words, 'as early as possible' after the words 'shall be held' in the proposed Section 30A, the words 'within 15 days' shall be substituted."

Mr. SPEAKER.—Amendment moved:

"That for the words, 'as early as possible' after the words 'shall be held' in the proposed Section 30A, the words 'within 15 days' shall be substituted."

There is also an amendment to this Clause by Sri D. B. Kalmankar. But, the hon. Member is not present.